**ಓ.ಎಸ್. ನಂ.50/2023**

KADW310001272023

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ**

**ಅಸಲು ದಾವಾ ಸಂಖ್ಯೆ 50/2023**

**ತೀರ್ಪಿನ ದಿನಾಂಕ:23 ನೇ ಜುಲೈ 2026**

**ಉಪಸ್ಥಿತರು**

**ಶ್ರೀ ರವೀಂದ್ರ ಎಲ್. ಹೋನೊಲೆ**

**ಬಿ.ಎ., ಎಲ್.ಎಲ್.ಬಿ (ಸ್ಪೇಷಲ್)**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕಲಘಟಗಿ.**

ವಾದಿ : 1 ಶ್ರೀಮತಿ ಪದ್ಮಾವತಿ ಕೋಂ ಕಲ್ಲಪ್ಪ
ಬಸರಿಕೊಪ್ಪ (ವಿವಾಹ ಪೂರ್ವದಲ್ಲಿ ಪದ್ಮಾವತಿ ತಂದೆ
ಕಲ್ಲಪ್ಪ ಕೋಟಿ, ವಯಾಃ 48 ವರ್ಷ, ಉಃ ಮನೆಗೆಲಸ,
ಸಾಃ ಧುಮ್ಮವಾಡ, ತಾಃ ಕಲಘಟಗಿ, ಜಿಃ ಧಾರವಾಡ
ಮುರುಘಾಮಠದ ಹತ್ತಿರ, ಧಾರವಾಡ.

(ಶ್ರೀ. ಎಮ್.ಬಿ. ಜೋಗಾರಿಶೆಟ್ಟರ/ಜಿ.ಜಿ. ಗದಗ ವಕೀಲರು)

ವಿರುದ್ಧ

**ಪ್ರತಿವಾದಿಯರು** : 1 ಶ್ರೀಮತಿ ಶಾಂತವ್ವ ಕೋಂ ಕಲ್ಲಪ್ಪ ಕೋಟಿ,
ವಯಾಃ 68 ವರ್ಷ, ಉಃ ಶೇತ್ಕಿ ವ ಮನೆಗೆಲಸ,
ಸಾಃ ಬಿ.ಗುಡಿಹಾಳ, ತಾಃ ಕಲಘಟಗಿ.
ಜಿಃ ಧಾರವಾಡ

2 ನಾಗಪ್ಪ ತಂದೆ ಕಲ್ಲಪ್ಪ ಕೋಟಿ,
ವಯಾಃ 40 ವರ್ಷ, ಉಃ ಶೇತ್ಕಿ,

ಸಾಃ ಬಿ.ಗುಡಿಹಾಳ, ತಾಃ ಕಲಘಟಗಿ.
ಜಿಃ ಧಾರವಾಡ

3 ಕಸ್ತೂರಿ ಮಹಾವೀರ ಹಾಲಪ್ಪನವರ,
ವಯಾಃ 38 ವರ್ಷ, ಉಃ ಮನೆಗೆಲಸ,
ಸಾಃ ಮುತ್ನಾಳ, ತಾಃ ಬೈಲಹೊಂಗಲ,
ಜಿಃ ಬೆಳಗಾವಿ

4 ರತ್ನವ್ವ ತಂದೆ ಭೀಮಪ್ಪ ಅರಳಪ್ಪನವರ,
ವಯಾಃ 35 ವರ್ಷ, ಉಃ ಮನೆಗೆಲಸ,
ಸಾಃ ಕೋಣ್ಣೂರ, ತಾಃ ಗೋಕಾಕ,
ಜಿಃ ಬೆಳಗಾವಿ

**(ಪ್ರತಿವಾದಿ ನಂ.1 ಪರ ವಕೀಲರು- ಶ್ರೀ ವಿ.ಆರ್.ಗಾಣಗೇರ)**
**(ಪ್ರತಿವಾದಿ ನಂ.2 ರಿಂದ 4 ಪರ ವಕೀಲರು- ಶ್ರೀ ಎಸ್.ಆರ್.ಹೆಗಡೆ)**

| | | | |
|---|---|---|---|
| 1. | ದಾವೆ ಹೂಡಿದ ದಿನಾಂಕ | : | 02-06-2023 |
| 2. | ದಾವೆಯ ಸ್ವರೂಪ | : | ಪಾಲು |
| 3. | ಸಾಕ್ಷಿಯ ವಿಚಾರಣೆ ಪ್ರಾರಂಭವಾದ ದಿನಾಂಕ | : | 05-02-2024 |
| 4. | ತೀರ್ಪು ಘೋಷಿಸಲ್ಪಟ್ಟ ದಿನಾಂಕ | : | 23-07-2026 |

**ತೀರ್ಪು**

ವಾದಿ ಪ್ರಸುತ್ತ ದಾವೆಯನ್ನು ದಾವಾ ಆಸ್ತಿಗಳಲ್ಲಿಯ ತಮ್ಮ ಕಾನೂನು ಬದ್ಧ ಹಿಸ್ಸೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ.

**ವಾದಿಯ ದಾವೆಯ ಸಂಕ್ಷಿಪ್ತ ಸಾರಾಂಶಃ**

2. ಕಲಘಟಗಿ ತಾಲೂಕ ಬಿ ಗುಡಿಹಾಳ ಗ್ರಾಮದ ಜಮೀನು ರಿ.ಸ. ನಂ.159/4 ಮತ್ತು 159/5 ವಿಸ್ತೀರ್ಣ 08 ಎಕರೆ 03 ಗುಂಟೆ (ಪೋಟ ಕರಾರ

04 ಗುಂಟೆ ಒಟ್ಟು 07 ಎಕರೆ 35 ಗುಂಟೆ ಹಾಗೂ 04 ಎಕರೆ 12 ಗುಂಟೆ ಮತ್ತು ಬಿ ಗುಡಿಹಾಳ ಗ್ರಾಮದ ವಿಪಿಸಿ ನಂ.148 ಮನೆ ವ ಹಿತ್ತಲು ಇವು ದಾವಾ ಆಸ್ತಿಗಳು ಇರುತ್ತವೆ. (ಇನ್ನು ಮುಂದೆ ದಾವಾ ಆಸ್ತಿಗಳು ಎಂದು ಸಂಬೋಧಿಸಲಾಗುವುದು). ಮೂಲ ಪುರುಷ ಕಲ್ಲಪ್ಪ ಕೋಟಿ ಇವರಿಗೆ ಶಾಂತವ್ವ (ಪ್ರತಿವಾದಿ ನಂ.1) ಎಂಬ ಹೆಂಡತಿ ಹಾಗೂ ಅವರ ಮಗಳು ವಾದಿ. ಸದರಿ ಕಲ್ಲಪ್ಪ ಕೋಟಿ ಇವರಿಗೆ ಸುಧಾ (ಕಲ್ಲಪ್ಪನ ಹೆಂಡತಿ ಎಂದು ಕರೆದುಕೊಳ್ಳುವವರು) ಸದರಿಯವರಿಗೆ 3 ಜನ ಮಕ್ಕಳು (ಪ್ರತಿವಾದಿ ನಂ.2 ರಿಂದ 4).

3. ದಾವಾ ಆಸ್ತಿಗಳು ಹಿಂದು ಅವಿಭಕ್ತ ಕಟುಂಬಂದ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಮೂಲತಃ ಕಲ್ಲಪ್ಪನಿಗೆ ಸೇರಿದ ಆಸ್ತಿಗಳಾಗಿರುತ್ತವೆ. ವಾದಿ ಹಾಗೂ 1 ನೇ ಪ್ರತಿವಾದಿಯರ ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾದೀನ ಹಾಗೂ ವಹಿವಾಟು ಹೊಂದಿರುತ್ತಾರೆ. ವಸ್ತುಸ್ಥಿತಿ ಹೀಗಿರುವಾಗ ಸುಧಾ ಎನ್ನುವವರು ಕಲ್ಲಪ್ಪನ ಹೆಂಡತಿ ಎಂದು ಹೇಳಿಕೊಳ್ಳುತ್ತಿದ್ದಳು ಇದರಿಂದಾಗಿ 1 ನೇ ಪ್ರತಿವಾದಿ ಕಲ್ಲಪ್ಪನೊಂದಿಗೆ ಮುನಿಸಿಕೊಂಡು ತವರು ಮನೆ ದುಮ್ಮವಾಡ ಗ್ರಾಮದಲ್ಲಿ ಹೋಗಿ ವಾಸವಾಗಿರುತ್ತಾರೆ. ಇದರ ದೂರುಪಯೋಗ ಪಡೆದುಕೊಂಡು ಸುಧಾ ಇವರು ಕಾನೂನು ಬಾಹೀರವಾಗಿ ಕಲ್ಲಪ್ಪನೊಂದಿಗೆ ವಾಸವಾಗಿರುತ್ತಾರೆ. 2021 ರಲ್ಲಿ ಕಲ್ಲಪ್ಪ ಮೃತ ಪಟ್ಟಿದ್ದು ಆ ಸಮಯದಲ್ಲಿ ವಾದಿ ಕಂದಾಯ ದಾಖಲೆಗಳನ್ನು ಪರಿಶೀಲಿಸಿದಾಗ 2 ರಿಂದ 4 ನೇ ಪ್ರತಿವಾದಿಯರ ಹೆಸರುಗಳು ದಾಖಲಾಗಿದ್ದು ಗೊತ್ತಾಗಿರುತ್ತದೆ. ವಾದಿಯು ನಂತರ 1 ನೇ ಪ್ರತಿವಾದಿಯನ್ನು ಭೇಟಿಯಾಗಿ ತನ್ನ ಪಾಲಿನ ಹಿಸ್ಸೆ ಕೇಳಲಾಗಿ 1 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಯರು ತನ್ನ ಗಂಡನ 2 ನೇ ಹೆಂಡತಿಯ ಮಕ್ಕಳು ಅವರಿಗೆ ಒಂದು ಭಾಗ ನಿನಗೆ ಒಂದು

ಭಾಗ ಎಂದು ತೆಗದುಕೊಳ್ಳಲು ಹೇಳಿದ್ದರಿಂದ ವಾದಿ ಸ್ವಲ್ಪ ದಿನ ಸುಮ್ಮನಾಗಿರುತ್ತಾರೆ. ಪುನಃ 1 ನೇ ಪ್ರತಿವಾದಿಯನ್ನು ವಿಚಾರಿಸಿದಾಗ 2 ನೇ ಪ್ರತಿವಾದಿ ಒಪ್ಪುತ್ತಿಲ್ಲ. ಸಮಭಾಗ ಬೇಕು ಎಂದು ಕೇಳಿರುತ್ತಾರೆ ಎಂದು ಹೇಳಿದ್ದು ಅದಕ್ಕೆ ಒಪ್ಪಿದ್ದರು ಕೂಡಾ 1 ನೇ ಪ್ರತಿವಾದಿಯರು ದಿನ ಮುಂದೂಡುತ್ತ ಬಂದಿರುತ್ತಾರೆ. ಈ ಬಗ್ಗೆ ವಾದಿಯು ಹಿರಿಯರನ್ನು ಕೂಡಿಸಿ ಪ್ರತಿವಾದಿಯರನ್ನು ಕೇಳಿದಾಗ ಅವರು ಸಹಕಾರ ನೀಡದೆ ಇದ್ದಿದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿ ದಾವಾ ಆಸ್ತಿಗಳಲ್ಲಿಯ ತನ್ನ 1/5 ಹಿಸ್ಸೆಯನ್ನು ಸರಸ ನಿರಸ ವಿಭಾಗ ಮಾಡಿಕೊಡಬೇಕು ಎಂದು ಕೇಳಿಕೊಂಡಿರುತ್ತಾರೆ.

4. ದಾವೆ ಸಲ್ಲಿಸಿದ ನಂತರ ಪ್ರತಿವಾದಿಯರಿಗೆ ಸಮನ್ಸ ನೀಡಲಾಗಿ ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ. 1 ನೇ ಪ್ರತಿವಾದಿಯು ವಕೀಲರ ಮೂಲಕ ಹಾಜರಾಗಿದ್ದರು ಕೂಡಾ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. 2 ನೇ ಪ್ರತಿವಾದಿಯು ಪ್ರತಿವಾದಪತ್ರ ಸಲ್ಲಿಸಿದ್ದು ಅದನ್ನು 3 ಮತ್ತು 4 ನೇ ಪ್ರತಿವಾದಿಯರು ಅಳವಡಿಸಿಕೊಂಡಿರುತ್ತಾರೆ. ತಮ್ಮ ಪ್ರತಿವಾದ ಪತ್ರದಲ್ಲಿ ವಾದಿ ಸಲ್ಲಿಸಿದ ದಾವೆ ಖೊಟ್ಟಿ ಹಾಗೂ ಊರ್ಜಿತವಲ್ಲ. ವಂಶಾವಳಿಯಲ್ಲಿ ತೋರಿಸಿದ ವಿವರಗಳನ್ನು ಅಲ್ಲಗಳೆದಿರುತ್ತಾರೆ. 1 ನೇ ಪ್ರತಿವಾದಿ ಮೃತ ಕಲ್ಲಪ್ಪ ಕೋಟಿ ಇವರ ಹೆಂಡತಿ ಹಾಗೂ ವಾದಿ ಮಗಳು ಎಂಬುದನ್ನು ನಿರಾಕರಿಸಿರುತ್ತಾರೆ. ಕಲ್ಲಪ್ಪ ಕೋಟಿ ಇವರು 1 ನೇ ಪ್ರತಿವಾದಿಯನ್ನು ಎಂದಿಗೂ ಮದುವೆ ಆಗಿಲ್ಲ ಹಾಗೂ ವಾದಿ ಅವರ ಮಗಳು ಅಲ್ಲ. ಸದರಿ ಸಂಗತಿಯನ್ನು ರುಜುವಾತು ಪಡಿಸುವ ಹೊಣೆಗಾರಿಕೆ ವಾದಿಯ ಮೇಲೆ ಇರುತ್ತದೆ. ಮುಂದುವರೆದು, ದಾವಾ ಆಸ್ತಿಗಳು ಮೃತ ಕಲ್ಲಪ್ಪನ ಆಸ್ತಿಗಳು ಎಂಬುದನ್ನು ಒಪ್ಪಿಕೊಂಡಿರುತ್ತಾರೆ, ಆದರೆ ವಾದಿ ಹಾಗೂ 1 ನೇ

ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನ ಹೊಂದಿರುವುದನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ಮೃತ ಕಲ್ಲಪ್ಪನಿಗೆ 4 ಜನ ಸಹೋದರಿಯರು ಇದ್ದು 2 ಜನ ಸಹೋದರಿಯರು ಮೃತ ಪಟ್ಟಿದ್ದು ಅವರ ವಾರಾಸುದಾರರು ಹಾಗೂ ಉಳಿದ 2 ಜನ ಸಹೋದರಿಯರು ಅವಶ್ಯಕ ಪಕ್ಷಗಾರರು. ಆದ್ದರಿಂದ ವಾದಿಯ ದಾವೆ ವಿಚಾರಣೆಗೆ ಅರ್ಹರಲ್ಲ. ಮುಂದುವರೆದು, ಪ್ರತಿವಾದ ಪತ್ರದಲ್ಲಿ ಮೃತ ಕಲ್ಲಪ್ಪನು ಸುಧಾ ಇವಳನ್ನು ಹಿಂದೂ ಜೈನ ಸಂಪ್ರದಾಯದ ಪ್ರಕಾರ ಹಾನಗಲ್ ತಾಃ ವಿರಾಪೂರದಲ್ಲಿ ಮದುವೆ ಆಗಿರುತ್ತಾರೆ. ಮದುವೆ ಆದ ನಂತರ ಕಲ್ಲಪ್ಪನ ಜೊತೆಗೆ ಗುಡಿಹಾಳ ಗ್ರಾಮದಲ್ಲಿ ಒಂದೇ ಮನೆಯಲ್ಲಿ ಗಂಡ ಹೆಂಡತಿ ಎಂದು ಸಂಸಾರ ನಡೆಸಿದ್ದು, ಅದರ ಫಲವಾಗಿ 2 ರಿಂದ 4 ನೇ ಪ್ರತಿವಾದಿಯರು ಜನಿಸಿರುತ್ತಾರೆ. 1 ನೇ ಪ್ರತಿವಾದಿಯ ಕಲ್ಲಪ್ಪನ ಸೋದರ ಮಾವನ ಮಗಳಾಗಿದ್ದು ಅವಳನ್ನು ಎಂದಿಗೂ ಮದುವೆ ಆಗಿರಲಿಲ್ಲ ಹಾಗೂ ಕೂಡಿ ಸಂಸಾರ ಮಾಡಿಲ್ಲ. ಮುಂದುವರೆದು, 1 ನೇ ಪ್ರತಿವಾದಿ ದಿಃ 26-02-1976 ರಂದು ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿದ್ದು ಆಗ ವಾದಿ ಹುಟ್ಟಿರಲಿಲ್ಲ ಇದರಿಂದ 1 ನೇ ಪ್ರತಿವಾದಿ ಕಲ್ಲಪ್ಪನ ಹೆಂಡತಿ ಹಾಗೂ ವಾದಿ ಕಲ್ಲಪ್ಪನ ಮಗಳು ಅಲ್ಲ ಎಂದು ಸಾಬೀತು ಆಗುತ್ತದೆ. 1 ನೇ ಪ್ರತಿವಾದಿಗೆ ಮದುವೆ ಆಗಿರಲಿಲ್ಲ ಆದ್ದರಿಂದ ಕಲ್ಲಪ್ಪನ ಹೆಂಡತಿ ಎಂದು ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ವಾದ ಮಂಡಿಸಿರುತ್ತಾರೆ. ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

5. ವಾದ ಪತ್ರ, ಪ್ರತಿವಾದ ಪತ್ರ ಮತ್ತು ಕಡತದಲ್ಲಿನ ಇತರೇ ದಾಖಲೆಗಳನ್ನು ಪರಿಶೀಲಿಸಿ ವ ಪರಿಗಣಿಸಿ ಈ ಕೆಳಗಿನ ವಿವಾದಾಂಶಗಳನ್ನು

ರಚಿಸಿದ್ದು ಇರುತ್ತದೆ.

## ವಿವಾದಾಂಶಗಳು

1. Whether the plaintiff proves that she and defendants constitute joint family?
2. Whether the plaintiff proves that suit properties are the ancestral joint family properties?
3. Whether the defendant No.2 to 4 prove that defendant No.1 is not the wife and plaintiff is not the daughter of propositus Kallappa Koti as such suit of the plaintiff is not maintainable?
4. Whether the plaintiff is entitled for the relief as sought for?
5. What order or decree?

6. ದಿನಾಂಕ 15-07-2026 ರಂದು ಮಾಡಿದ ಮಧ್ಯಂತರ ಆದೇಶದ ಮೇರಗೆ ವಿವಾದಾಂಶ ನಂ.3 ನ್ನು ಈ ಕೆಳಗಿನಂತೆ ಪುನರ್ ರಚಿಸಲಾಗಿದೆ.

> " Whether the plaintiff proves that she was the daughter of defendant No.1 through deceased Kallappa Koti?"

7. ವಾದಿಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ತನ್ನನ್ನು ಪಿಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು, ನಿಶಾನೆ ಪಿ-1 ರಿಂದ 12 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

8. ಪ್ರತಿವಾದಿಯರು ತಮ್ಮ ಪ್ರಕರಣವನ್ನು ರುಜುವಾತು ಪಡಿಸಲು 2 ನೇ ಪ್ರತಿವಾದಿ ತನ್ನನ್ನು ಡಿಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು, ನಿಶಾನೆ ನಿಡಿ-1 ರಿಂದ 17 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ರಾಮಪ್ಪ ಯಮ್ಮೆಟ್ಟಿ ಎನ್ನುವವರನ್ನು ಡಿಬ್ಲ್ಯೂ-2 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ.

9. ಉಭಯ ವಕೀಲರ ವಾದವನ್ನು ಆಲಿಸಿದೆನು.

10. ಈ ಮೇಲಿನ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ವಿವಾದಾಂಶ 1, ಸಕಾರಾತ್ಮಕವಾಗಿ

ವಿವಾದಾಂಶ 2 ಸಕಾರಾತ್ಮಕವಾಗಿ

ಪುನರ್ ರಚಿಸಿದ ವಿವಾದಾಂಶ 3 ಸಕಾರಾತ್ಮಕವಾಗಿ ಪುನರ್ ರಚಿಸಲಾಗಿದೆ.

ವಿವಾದಾಂಶ **4** ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

11. **ಪುನರ್ ರಚಿಸಿದ ವಿವಾದಾಂಶ ನಂ. 3**: ವಾದಿಯ ಪ್ರಕರಣವೇನೆಂದರೆ, 1 ನೇ ಪ್ರತಿವಾದಿ ಮೃತ ಕಲ್ಲಪ್ಪನ ಹೆಂಡತಿ 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪ ಇವರ ವೈವಾಹಿಕ ಜೀವನದಿಂದಾಗಿ ವಾದಿ ಜನಿಸಿರುತ್ತಾರೆ. ಒಬ್ಬಳು ಸುಧಾ ಎನ್ನುವವಳು ಕಲ್ಲಪ್ಪನ ಹೇಳಿಕೊಂಡಿದ್ದರಿಂದ 1 ನೇ ಪ್ರತಿವಾದಿ ತವರು ಮನೆಗೆ ಹೋಗಿ ಅಲ್ಲಿಯೇ ವಾಸವಾಗಿರುತ್ತಾರೆ. ಕಲ್ಲಪ್ಪ 2021 ರಲ್ಲಿ ಮೃತ ಪಟ್ಟಿದ್ದು, 2 ರಿಂದ 4 ನೇ ಪ್ರತಿವಾದಿಯರು ತಮ್ಮ ಹೆಸರನ್ನು

ದಾಖಲಿಸಿಕೊಂಡಿರುತ್ತಾರೆ. ದಾವಾ ಆಸ್ತಿಗಳು ಕಲ್ಲಪ್ಪನ ಪಿತ್ರಾರ್ಜಿತ ಆಸ್ತಿಗಳು ಆಗಿದ್ದು, ವಾದಿ ಹಾಗೂ ಪ್ರತಿವಾದಿಯರು ಕಲ್ಲಪ್ಪನ ವಾರಸುದಾರರಾಗಿದ್ದು, ದಾವಾ ಆಸ್ತಿಯಲ್ಲಿ ಜಂಟಿ ಸ್ವಾಧೀನ ಹಾಗೂ ಅನುಭೋಗದಲ್ಲಿ ಇರುತ್ತಾರೆ. ಸದರಿ ಸಂಗತಿಯನ್ನು ಪ್ರತಿವಾದಿಯರು ಅಲ್ಲಗಳೆದಿದ್ದು ವಾದಿ ಹಾಗೂ 1 ನೇಪ್ರತಿವಾದಿ ಮೃತ ಕಲ್ಲಪ್ಪನಿಗೆ ಯಾವುದೇ ರಿತಿ ಸಂಭಂದ ಇರುವುದಿಲ್ಲ. 1 ನೇ ಪ್ರತಿವಾದಿಯು ಕಲ್ಲಪ್ಪನ ಜೊತೆಗೆ ಎಂದಿಗೂ ಹೆಂಡತಿ ಎಂದು ಸಂಸಾರ ಮಾಡಿರುವುದಿಲ್ಲ. ವಾದಿ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಗಳಿಗೆ ಸಂಬಂಧ ಇಲ್ಲ ಎಂದು ವಾದಿಸಿರುತ್ತಾರೆ.

12. ವಾದಿ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದ ಮಂಡಿಸುತ್ತ, 1 ನೇ ಪ್ರತಿವಾದಿಯು ಮೃತ ಕಲ್ಲಪ್ಪನ ಹೆಂಡತಿ ಅವರ ವೈವಾಹಿಕ ಜೀವನದಿಂದ ವಾದಿ ಜನಿಸಿರುತ್ತಾಳೆ. ದಾವಾ ಆಸ್ತಿಗಳು ಮೃತ ಕಲ್ಲಪ್ಪನ ಪಿತ್ರಾರ್ಜಿತ ಅವಿಭಕ್ತ ಕಟುಂಬದ ಆಸ್ತಿಗಳಾಗಿರುತ್ತವೆ. ವಾದಿ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನ ಹೊಂದಿರುತ್ತಾರೆ. 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪನ ಮಧ್ಯ ವಿವಾದ ಬಂದಿದ್ದರಿಂದ 1 ನೇ ಪ್ರತಿವಾದಿಯು ತನ್ನ ತವರು ಮನೆ ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿದ್ದು ಇದರ ದೂರುಪಯೋಗ ಪಡೆದುಕೊಂಡು ಸುಧಾ ಎನ್ನುವವಳು ಕಲ್ಲಪ್ಪನೊಂದಿಗೆ ಕಾನೂನ ಬಾಹಿರವಾಗಿ ವಾಸವಾಗಿದ್ದಾಳೆ. ಸದರಿ ಅವರು ಕಲ್ಲಪ್ಪನ ಹೆಂಡತಿ ಇರುವುದಿಲ್ಲ. ಕಲ್ಲಪ್ಪ ಮೃತ ಪಟ್ಟನಂತರ ವಾದಿ ಆಸ್ತಿ ದಾಖಲೆಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ 2 ರಿಂದ 4 ನೇ ಪ್ರತಿವಾದಿಯರ ಹೆಸರು ದಾಖಲಾಗಿರುವುದು ಕಂಡುಬಂದಿದ್ದು ಈ ಬಗ್ಗೆ ವಿಚಾರಿಸಲಾಗಿ 1 ನೇ ಪ್ರತಿವಾದಿ ಸದರಿಯವರು ಕಲ್ಲಪ್ಪನ 2 ನೇ ಹೆಂಡತಿ ಮಕ್ಕಳು ಅವರಿಗೂ ಕೂಡಾ

ಆಸ್ತಿಯಲ್ಲಿ ಪಾಲು ಇದೆ ಎಂದು ತಿಳಿಸಿರುತ್ತಾರೆ. ನಂತರ ವಾದಿ ಹಿರಿಯರ ಮೂಲಕ ದಾವಾ ಆಸ್ತಿಗಳಲ್ಲಿಯ ತನ್ನ ಪಾಲಿನ ಹಿಸ್ಸೆಯನ್ನು ವಿಂಗಡಿಸಿ ಕೊಡಲು ಕೇಳಿದ್ದು ನಿರಾಕರಿಸಿರುತ್ತಾರೆ. ಆದ್ದರಿಂದ, ವಾದಿ ಈ ದಾವೆ ಸಲ್ಲಿಸಿರುತ್ತಾರೆ.

13. ಮುಂದುವರೆದು, ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯೊಂದಿಗಿನ ಸಂಬಂಧವನ್ನು ಅಲ್ಲಗಳೆದಿರುತ್ತಾರೆ. ವಾದಿ ಹಾಜರುಪಡಿಸಿದ ದಾಖಲೆಗಳಲ್ಲಿ ಶಾಲಾ ಪ್ರಮಾಣ ಪತ್ರ, ಮತದಾರರ ಚೀಟಿ, ಇವುಗಳನ್ನು ಹಾಜರುಪಡಿಸಿದ್ದು ಅವುಗಳಲ್ಲಿ ವಾದಿಯ ತಂದೆ ಹೆಸರು ಕಲ್ಲಪ್ಪ ಎಂದು ನಮೂದಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿಯ ವಾದಿಯ ಹಿಸ್ಸೆಯನ್ನು ನೀಡಬಾರದು ಎನ್ನುವ ದುರುದ್ದೇಶದಿಂದ ವಾದಿ ದಾವಾ ಆಸ್ತಿಗಳಿಗೆ ಸಂಬಂಧ ಇಲ್ಲ ಎಂದು ಸುಳ್ಳು ವಾದ ಮಂಡಿಸಿರುತ್ತಾರೆ.

14. ಮುಂದುವರೆದ ತನ್ನ ವಾದದಲ್ಲಿ ವಾದಿಪರ ಮಾನ್ಯ ನ್ಯಾಯವಾದಿಗಳು, ವಾದಿ ಒಂದು ವೇಳೆ ಕಲ್ಲಪ್ಪನ ಮಗಳು ಅಲ್ಲ ಎಂದಾದರೆ ಯಾರ ಮಗಳು ಎಂಬುದನ್ನು ರುಜುವಾತು ಪಡಿಸುವ ಹೊಣೆಗಾರಿಕೆ ಪ್ರತಿವಾದಿಯರ ಮೇಲೆ ಇರುತ್ತದೆ. ಪ್ರತಿವಾದಿಯರು ವಿಚಾರಣೆ ಮಾಡಲ್ಪಟ್ಟ ಡಿ.ಡಬ್ಲೂ.2 ರವರಿಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿಯವರ ಸಾಕ್ಷ್ಯ ಪ್ರತಿವಾದಿಯರ ಪ್ರಕರಣಕ್ಕೆ ಸಹಾಯಕವಲ್ಲ. ವಾದಿ ಹಾಜರುಪಡಿಸಿದ ದಾಖಲೆಗಳು ಕಾನೂನಿನ ಅಡಿಯಲ್ಲಿ ಪೂರ್ವಭಾವನೆ ತಳೆಯಬಹುದಾದ ದಾಖಲೆಗಳಾಗಿದ್ದು ನಂಬಲರ್ಹ ದಾಖಲೆಗಳು. ವಾದಿ ಸೂಕ್ತ ಹಾಗೂ ಸುಸಂಬದ್ಧವಾದ ಸಾಕ್ಷ್ಯದ ಮೂಲಕ ತಮ್ಮ ಪ್ರಕರಣವನ್ನು ರುಜುವಾತು ಪಡಿಸಿರುತ್ತಾರೆ. ಆದ್ದರಿಂದ ವಾದಿಯ ದಾವೆಯನ್ನು ಡಿಕ್ರೀ ಮಾಡಬೇಕೆಂದು

ಕೇಳಿಕೊಂಡಿರುತ್ತಾರೆ.

15. ಪ್ರತಿವಾದಿಯರ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದ ಮಂಡಿಸುತ್ತ, ವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರ ಮಧ್ಯ ಯಾವುದೇ ಸಂಬಂಧ ಇರುವುದಿಲ್ಲ. 1 ನೇ ಪ್ರತಿವಾದಿಯು ಮೃತ ಕಲ್ಲಪ್ಪ ಸೋದರ ಮಾವನ ಮಗಳು ಆದ್ದರಿಂದ ವಾದಿ ಸದರಿ ಸಂಬಂಧವನ್ನು ದೂರುಪಯೋಗಪಡಿಸಿಕೊಂಡು ತಾನು 1 ನೇ ಪ್ರತಿವಾದಿಯ ಮಗಳು ಎಂದು ಸುಳ್ಳು ದಾವೆ ಸಲ್ಲಿಸಿರುತ್ತಾಳೆ. 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪ ಗಂಡ ಹೆಂಡತಿ ಎಂದು ಎಂದಿಗೂ ಸಂಸಾರ ಮಾಡಿರುವುದಿಲ್ಲ. ವಾದಿ ಹಾಜರುಪಡಿಸಿರುವ ದಾಖಲೆಗಳು ವಾದಿಯ ಪಿತೃತ್ವವನ್ನು ರುಜುವಾತ ಪಡಿಸುವುದಿಲ್ಲ. ಶಾಲೆಯವರು ನೀಡಿದ ಪ್ರಮಾಣ ಪತ್ರದ ಮೇರಗೆ ದಾವೆ ಸಲ್ಲಿಸಿದ್ದು ಅದು ನಮ್ಮಲಾರದ ದಾಖಲೆ ಅಲ್ಲ. ವಾದಿ ತನ್ನ ದಾವೆಗೆ ಪೂರಕವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ಹಾಗೂ ಮೃತ ಕಲ್ಲಪ್ಪನ ಮದುವೆ ದಿನಾಂಕದ ಬಗ್ಗೆ ವಾದ ಪತ್ರದಲ್ಲಿ ಏನನ್ನು ಹೇಳಿರುವುದಿಲ್ಲ. ಸದರಿ ಮದುವೆಗೆ ಸಂಬಂಧಿಸಿದಂತೆ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. ವಾದಿ ಹಾಗೂ 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿದ್ದು, 1 ನೇ ಪ್ರತಿವಾದಿಯನ್ನು ವಿಚಾರಣೆ ಮಾಡಿರುವುದಿಲ್ಲ. ಪ್ರಮುಖ ಸಾಕ್ಷಿ ವಾದಿ ನ್ಯಾಯಾಲಯದ ಮುಂದೆ ಹಾಜರುಪಡಿಸಲು ವಿಫಲಾಗಿರುತ್ತಾರೆ. ಮುಂದುವರೆದು ಮೃತ ಕಲ್ಲಪ್ಪನಿಗೆ 4 ಜನ ಸಹೋದರಿಯರು ಇದ್ದು ಅವರಲ್ಲಿ ಇಬ್ಬರು ಮೃತ ಪಟ್ಟಿದ್ದು ಇಬ್ಬರೂ ಜೀವಂತವಾಗಿರುತ್ತಾರೆ. ಮೃತ ಕಲ್ಲಪ್ಪನ ಸಹೋದರಿಯರು ಹಾಗೂ ಅವರ ವಾರಸುದಾರರನ್ನು ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ. ಆದ್ದರಿಂದ ವಾದಿಯರ ದಾವೆ ಅವಶ್ಯಕ

ಪಕ್ಷಗಾರರ ಕೊರತೆಯಿಂದ ಬಳಲುತ್ತಿದ್ದು ವಿಚಾರಣೆಗೆ ಅರ್ಹವಲ್ಲ. ವಾದಿಯು ದಾವಾ ಆಸ್ತಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ. ಕಂದಾಯ ದಾಖಲೆಗಳಲ್ಲಿ 2 ರಿಂದ 4 ನೇ ಪ್ರತಿವಾದಿಯ ಹೆಸರು ದಾಖಲಿಸಿದ್ದು ಅವರೆ ಅವುಗಳ ಮಾಲಿಕರು ಹಾಗೂ ಸ್ವಾದಿನದಾರರು.

16. ಪ್ರತಿವಾದ ಪರ ವಕೀಲರು ತಮ್ಮ ವಾದ ಮುಂದುವರೆಸುತ್ತಾ, ಪ್ರತಿವಾದಿಯರು ಹಾಜರುಪಡಿಸಿದ ದಾಖಲೆಗಳು ಮೃತ ಕಲ್ಲಪ್ಪನ ಹೆಂಡತಿ ಸುಧಾ ಎಂಬುದು ಸ್ಪಷ್ಟವಾಗುತ್ತದೆ. ಪಡಿತರ ಚೀಟಿಯಲ್ಲಿ ಸುಧಾ ಹಾಗೂ ಅವರ ಮಕ್ಕಳ ಹೆಸರುಗಳು ದಾಖಲಿರುತ್ತವೆ. 2 ರಿಂದ 4 ನೇ ಪ್ರತಿವಾದಿಯರು ಮೃತ ಕಲ್ಲಪ್ಪನ ಮಕ್ಕಳು ಎಂಬುದು ಶಾಲಾ ದಾಖಲಾತಿಗಳಿಂದ ರುಜುವಾತು ಆಗುತ್ತದೆ. ಕಲ್ಲಪ್ಪ ಇವರು 1 ನೇ ಪ್ರತಿವಾದಿಯ ವಿರುದ್ದ ಜಿಲ್ಲಾ ನ್ಯಾಯಾಲಯದಲ್ಲಿ ಕ್ರೀಮಿನಲ್ ಮಿಸ್ ನಂ.67/1995 ರಂತೆ ಆದ ಆದೇಶದ ವಿರುದ್ದ ಕ್ರಿಮಿನಲ್ ಮೇಲ್ಮನವಿ ಸಂಖ್ಯೆ 245/2008 ನ್ನು ಸಲ್ಲಿಸಿದ್ದು ಅದು ಪುರಸ್ಕೃತಗೊಂಡು ಜೀವನಾಂಶದ ಆದೇಶವನ್ನು ವಜಾಗೊಳಿಸಲಾಗಿದೆ. ಇದರಿಂದ 1 ನೇ ಪ್ರತಿವಾದಿ ಕಲ್ಲಪ್ಪನ ಹೆಂಡತಿ ಅಲ್ಲ ಎಂದು ರುಜುವಾತು ಆಗುತ್ತದೆ. ಕಲ್ಲಪ್ಪ ಹಾಗೂ 1 ನೇ ಪ್ರತಿವಾದಿ ಕೂಡಿ ಸಂಸಾರ ಮಾಡಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. 1 ನೇ ಪ್ರತಿವಾದಿ ಕಲ್ಲಪ್ಪನ ಹೆಂಡತಿ ಹಾಗೂ ಕಲ್ಲಪ್ಪನ ಮಗಳು ಅಲ್ಲ. ವಾದಿ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಗಳಿಗೆ ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿರುವುದಿಲ್ಲ. ಆದ್ದರಿಂದ ವಾದಿ ಸಲ್ಲಿಸಿದ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕು ಎಂದು ಕೇಳಿಕೊಂಡಿರುತ್ತಾರೆ.

17. 2 ರಿಂದ 4 ನೇ ಪ್ರತಿವಾದಿ ಪರ ವಕೀಲರು ಮಂಡಿಸಿದ ವಾದಕ್ಕೆ ಪ್ರತಿ ಉತ್ತರವಾಗಿ ವಾದಿ ಪರ ವಕೀಲರು ವಾದ ಮಂಡಿಸುತ್ತ ಡಿ.ಡಬ್ಲ್ಯೂ.1 ರವರು

10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದರು ಕೂಡಾ ತನ್ನ ಜನ್ಮ ದಿನಾಂಕವನ್ನು ಹೇಳಲು ಬರುವುದಿಲ್ಲ ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದಾನೆ ಎಂಬುವುದು ಸ್ಪಷ್ಟವಾಗುತ್ತದೆ. ನಿ.ಡಿ.11 ನ್ನು 2025 ರಲ್ಲಿ ಪಡೆದುಕೊಂಡಿದ್ದು ಪತ್ರಿಕಾ ಪ್ರಕಟಣೆಯ ಮೂಲ ದಾಖಲೆ ಹಾಜರುಪಡಿಸಿಲ್ಲ. ಒಂದು ವೇಳೆ 1 ನೇ ಪ್ರತಿವಾದಿ ಕಲ್ಲಪ್ಪನ ಹೆಂಡತಿ ಇಲ್ಲದಿದ್ದರೆ ಈ ಬಗ್ಗೆ ಪ್ರತ್ಯುತ್ತರವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಬಹುದಾಗಿತ್ತು. ಪತ್ರಿಕಾ ಜಾರಿ ಆದ ನಂತರದಲ್ಲಿ 1 ನೇ ಪ್ರತಿವಾದಿ ತನಗೆ ಪದ್ಮವ್ವ ಎಂಬ ಹೆಣ್ಣು ಮಗಳು ಇದ್ದಾಳೆ ಎಂಬುವುದನ್ನು ಘೋಷನೆ ಮಾಡಿದ್ದಾರೆ ಎಂಬುವುದು ಸ್ಪಷ್ಟ. ವಾದಿಯನ್ನು ಶಾಲೆಗೆ ದಾಖಲಿಸುವಾಗ ಜನ್ಮ ದಿನಾಂಕ ಬದಲಾಯಿಸಿರಬಹುದು. ಆದರೆ ವಾದಿ ಕಲ್ಲಪ್ಪನ ಮಗಳು ಅಲ್ಲ ಎಂದು ಭಾವಿಸಲು ಬರುವುದಿಲ್ಲ. ವಾದಿ ಕೆಳಗಿನ ಜಾತಿಯ ವ್ಯಕ್ತಿಯನ್ನು ಮದುವೆ ಆಗಿದ್ದಾಳೆ ಎಂಬ ಒಂದೇ ಉದ್ದೇಶದಿಂದ ಪ್ರತಿವಾದಿಯರು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸಂಬಂಧ ಅಲ್ಲಗಳೆದಿರುತ್ತಾರೆ. ವಾದಿಯು ಪ್ರತಿವಾದಿಯರಿಗೆ ಸಂಬಂಧ ಪಡದಿದ್ದರೆ ನಿ.ಡಿ.2 ರಿಂದ 4 ದಾಖಲೆಗಳನ್ನು ಹಾಜರುಪಡಿಸುವ ಅವಶ್ಯಕತೆ ಇರಲಿಲ್ಲ. ವಾದಿ ಹಾಗೂ 1 ನೇ ಪ್ರತಿವಾದಿ ಮಧ್ಯದ ಸಂಬಂಧ ಚೆನ್ನಾಗಿರುವುದಿಲ್ಲ. ಪ್ರತಿವಾದಿಯರು ಬಲಾಢ್ಯರಾಗಿದ್ದು ಸಾಕ್ಷಿದಾರರಿಗೆ ಹೆದರಿಕೆ ಹಾಕುತ್ತಿದ್ದಾರೆ. ಆದ್ದರಿಂದ ಯಾವುದೇ ಸಾಕ್ಷಿದಾರರು ಸಾಕ್ಷಿ ನುಡಿಯಲು ಮುಂದೆ ಬರುತ್ತಿಲ್ಲ. ಆದ್ದರಿಂದ ವಾದಿಯ ದಾವೆಯನ್ನು ಡಿಕ್ರೀ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

18. ವಾದ, ಪ್ರತಿವಾದ, ವಿವಾದಾಂಶ ಹಾಗೂ ಉಭಯ ಪಕ್ಷಗಾರರು ಮಂಡಿಸಿದ ವಾದವನ್ನು ಗಮನದಲ್ಲಿ ಇಟ್ಟುಕೊಂಡು, ಪಕ್ಷಗಾರರು ಮಂಡಿಸಿದ ಸಾಕ್ಷ್ಯವನ್ನು ಪರಿಶೀಲಿಸಿದೆನು. ವಾದಿಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು

ತನ್ನನ್ನು ಪಿಡಬ್ಲೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ವಾದ ಪತ್ರದಲ್ಲಿಯ ಸಂಗತಿಗಳನ್ನು ಪುನರುಚ್ಛರಿಸಿರುತ್ತಾರೆ. ತಮ್ಮ ಪ್ರಕರಣಕ್ಕೆ ಪೂರಕವಾಗಿ ದಾಖಲೆಗಳನ್ನುಹಾಜರಪಡಿಸಿದ್ದು, ನಿಪಿ-1 ರಿಂದ 5 ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳು, 2 ನೇ ಪ್ರತಿವಾದಿಯ ಹೆಸರು ದಾವಾ ಅನುಸೂಚಿ 1, ಸರ್ವೇ ನಂ.159/*/4 ಕ್ಕೆ ಹಾಗೂ ಸರ್ವೇ ನಂ.159/*/5 ಕ್ಕೆ ಮೃತ ಕಲ್ಲಪ್ಪ ಹಾಗೂ 3 ಮತ್ತು 4 ನೇ ಪ್ರತಿವಾದಿಯರ ಹೆಸರುಗಳು ದಾಖಲಿರುತ್ತವೆ. 1982 - 1983 ರಿಂದ 1994 - 1995 ರ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಲಾಗಿ ಕಲ್ಲಪ್ಪ ಜಿನ್ನಪ್ಪ ಕೋಟಿ ಇವರ ಹೆಸರು ವಾಟ್ನಿ ಪ್ರಕಾರ ದಾಖಲಾಗಿರುವುದು ಸ್ಪಷ್ಟವಾಗುತ್ತದೆ. ನಿ.ಪಿ.6 ಹಕ್ಕು ಬಿಟ್ಟುಕೊಟ್ಟಪತ್ರ 1617, ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ದಿಃ 15-11-1979 ರಲ್ಲಿ ಜಿನ್ನಪ್ಪ ಕಲ್ಲಪ್ಪ ಕೋಟಿ ಇವರು ತನ್ನ 2 ಜನ ಮಕ್ಕಳಾದ 1. ಧರ್ಮಪ್ಪ, 2. ಕಲ್ಲಪ್ಪ ಇವರುಗಳ ಮಧ್ಯ ವಾಟ್ನಿ ಮಾಡಿ ಕೊಟ್ಟಿದ್ದು ಆ ಪ್ರಕಾರ ಜಮೀನುಗಳಲ್ಲಿ ಧರ್ಮಪ್ಪ ಮತ್ತು ಕಲ್ಲಪ್ಪ ಇವರ ಹೆಸರುಗಳು ಸರ್ವೆ ನಂ.159/1 ವಿಸ್ತೀರ್ಣ 11 ಎಕರೆ 36 ಗುಂಟೆ ಹಾಗೂ ಸರ್ವೆ ನಂ.159/2 ವಿಸ್ತೀರ್ಣ 11 ಎಕರೆ 35 ಗುಂಟೆ ಜಮೀನುಗಳಲ್ಲಿ ಹೆಸರು ದಾಖಲಾಗಿರುತ್ತವೆ.

19. ಈ ಹಂತದಲ್ಲಿ ವಾದಿ ಹಾಜರುಪಡಿಸಿದ ಕಂದಾಯ ದಾಖಲೆಗಳಲ್ಲಿ ಮೂಲ ಪುರುಷ ಕಲ್ಲಪ್ಪ ಇವರು ತನ್ನ ಜೀವಿತ ಕಾಲದಲ್ಲಿ ತನ್ನ ಇಬ್ಬರು ಮಕ್ಕಳ ಮಧ್ಯೆ ವಾಟ್ನಿ ಮಾಡಿಕೊಂಡಿದ್ದು, ಅದರ ಪ್ರಕಾರ 1979 ರಿಂದ ಕಲ್ಲಪ್ಪ ಹಾಗೂ ಆತನ ಸಹೋದರ ಧರ್ಮಪ್ಪ ತಮ್ಮ ತಮ್ಮ ಪಾಲಿನ ಆಸ್ತಿಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಮೂಲ

ಪುರುಷ ಜಿನ್ನಪ್ಪನ ಮಕ್ಕಳು ಸದರಿ ಪಾಲನ್ನು ಇದುವರೆಗೆ ಪಶ್ನಿಸಿಲ್ಲ. ಆದ್ದರಿಂದ ಕಲ್ಲಪ್ಪನ ಸಹೋದರಿಯರಿಗೂ ದಾವಾ ಆಸ್ತಿಗಳಲ್ಲಿ ಪಾಲು ಇದ್ದು ಅವರನ್ನು ದಾವೆಯಲ್ಲಿ ಸೇರಿಸದೆ ಇರುವುದರಿಂದ ವಾದಿಯ ದಾವೆ ಅವಶ್ಯಕ ಪಕ್ಷಗಾರರನ್ನು ಸೇರಿಸದೇ ಇರುವುದರಿಂದ ಉರ್ಜಿತವಲ್ಲ ಎಂಬ 2 ರಿಂದ 4 ನೇ ಪ್ರತಿವಾದಿಯರ ವಾದದಲ್ಲಿ ಯಾವುದೇ ಹಕ್ಕುಗಳಿಲ್ಲ ಎಂದು ಪರಿಗಣಿಸುತ್ತೇನೆ.

20. ನಿ.ಪಿ.9 ಗ್ರಾಮ ಪಂಚಾಯತಿ ಕುರುವಿನಕೊಪ್ಪ ಇವರು ನೀಡಿದ ದೃಡಿಕರಣ ಪತ್ರ ಬಿ ಗುಡಿಹಾಳ ಗ್ರಾಮದ ಆಸ್ತಿ ನಂ.148 ಇದು ಕಲ್ಲಪ್ಪ ಕೋಟಿ ಇವರ ಹೆಸರನಲ್ಲಿ ಇದ್ದು ಅದರ ಮಾಲಿಕರು ಇರುತ್ತಾರೆ ಎಂದು ದೃಡಿಕರಣ ಪತ್ರ ನೀಡಿರುತ್ತಾರೆ. ನಿ.ಪಿ.10 ಗ್ರಾಮ ಪಂಚಾಯತಿಯವರು ನೀಡಿದ ಕರ ಪಾವತಿ ರಶೀದಿ. ನಿ.ಪಿ.7 ಕಲ್ಲಪ್ಪ ಜಿನ್ನಪ್ಪ ಕೋಟಿ ಇವರ ಮರಣ ಪ್ರಮಾಣ ಪತ್ರ. ಸದರಿಯರು 01-12-2021 ರಂದು ಮರಣ ಬಿ ಗುಡಿಹಾಳ ಗ್ರಾಮದಲ್ಲಿಮೃತ ಪಟ್ಟಿರುತ್ತಾರೆ.

21. ನಿ.ಪಿ.8 - ಶಾಲಾ ಪ್ರಮಾಣ ಪತ್ರ, ಬಿ ಗುಡಿಹಾಳ ಗ್ರಾಮದ ಮುಖ್ಯೋಪಾಧ್ಯಾಯರು ನೀಡಿದ್ದು, ಅದರಲ್ಲಿ, ಪದ್ಮಾವತಿ ಕಲ್ಲಪ್ಪ ಕೋಟಿ ಸದರಿ ಇವರು ಐದನೇ ತರಗತಿ ವರೆಗೆ ಓದಿದ್ದು ಇವಳ ಜಾತಿ ಜೈನ ಜನ್ಮ ದಿನಾಂಕ ದಿಃ 04-05-1976 ಇರುತ್ತದೆ. ಜನ್ಮ ಸ್ಥಳ ದುಮ್ಮವಾಡ, ತಾಲೂಕ ಕಲಘಟಗಿ ನಮ್ಮ ಶಾಲೆಯ ಒಂದನೆಯ ನಂಬರ ರಜಿಸ್ಟರ್ ನಂ.003 ನಂ.52 ರ ಪ್ರಕಾರ ಈ ಪ್ರಮಾಣ ಪತ್ರ ನೀಡಲಾಗಿದೆ ಎಂಬ ಬಗ್ಗೆ ಉಲ್ಲೇಖಿಸಲಾಗಿದೆ. ನಿ.ಪಿ.4 ನ್ನು ಪರಿಶೀಲಿಸಲಾಗಿ, ಸದರಿ ದಾಖಲೆ ವಾದಿಗೆ ಸೇರಿದ್ದು, ಅದರಲ್ಲಿ ವಾದಿಯ ತಂದೆಯ ಹೆಸರು ಕಲ್ಲಪ್ಪ ಕೋಟಿ ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಇದರಿಂದ

ವಾದಿಯು ಕಲ್ಲಪ್ಪನ ಮಗಳು ಎಂಬುದು ರುಜುವಾತಾಗುತ್ತದೆ. ನಿ.ಪಿ.8 ರಲ್ಲಿಯ ವಿವರವನ್ನು ವಾದಿ ಹಾಗೂ ಪ್ರತಿವಾದಿಯರ ಮಧ್ಯದ ವಿವಾದಕ್ಕಿಂತ ಮುಂಚೆ ನಮೂದಿಸಿದ್ದು ನಂಬಲರ್ಹವಾಗಿದೆ. ನಿ.ಪಿ.8 ಶಾಲಾ ಪ್ರಮಾಣ ಪತ್ರ ಆಗಿದ್ದು ಸದರಿ ದಾಖಲೆ ಕಾನೂನಿನ ಅಡಿಯಲ್ಲಿ ಪೂರ್ವ ಭಾವನೆ ತಳೆಯಬಹುದಾದ ದಾಖಲೆ ಆಗಿರುತ್ತದೆ. ನಿ.ಪಿ.8 ನ್ನು ಪರಿಶೀಲಿಸಿದಾಗ ವಾದಿ ಮೃತ ಕಲ್ಲಪ್ಪ ಕೋಟಿ ಇವರ ಮಗಳು ಎಂಬುವುದು ಅಂತ್ಯಂತ ಸ್ಪಷ್ಟವಾಗಿ ರುಜುವಾತು ಆಗುತ್ತದೆ. ಸದರಿ ದಾಖಲೆಯಲ್ಲಿಯ ನಮೂದನ್ನು ಅಲ್ಲಗಳೆಯಲು 2 ರಿಂದ 4 ಪ್ರತಿವಾದಿಯರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

22. ನಿ.ಪಿ.11 ಮತದಾರರ ಪಟ್ಟಿ, 2024 ರ ಕಲಘಟಗಿ ವಿಧಾನ ಸಭಾ ಮತ ಕ್ಷೇತ್ರದ ಯಾದಿ. ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಕ್ರಮ ಸಂಖ್ಯೆ 707 ರಲ್ಲಿ ಹೆಸರು ಶಾಂತವ್ವ ಕೋಟಿ, ಗಂಡನ ಹೆಸರು ಕಲ್ಲಪ್ಪ ಕೋಟಿ, ಮನೆ ಸಂ.100, ವಯಸ್ಸು 68, ಲಿಂಗ ಹೆಣ್ಣು ಎಂದು ನಮೂದಿಸಿರುತ್ತಾರೆ. ನಿ.ಪಿ.11 ರ ಕ್ರಮ ಸಂ.706 ರಲ್ಲಿ ಸುಧಾ ಕೋಟಿ ಇವರ ಹೆಸರು ದಾಖಲು ಇರುತ್ತದೆ. ಕ್ರಮ ಸಂ.708 ರಲ್ಲಿ 2 ನೇ ಪ್ರತಿವಾದಿ ಹಾಗೂ 709 ರಲ್ಲಿ ಆತನ ಹೆಂಡತಿ ಹೆಸರುಗಳು ದಾಖಲಿರುತ್ತವೆ. 1 ನೇ ಪ್ರತಿವಾದಿಯ ಹೆಸರು ಈಗಲೂ ಕೂಡ ಧುಮ್ಮವಾಡ ಗ್ರಾಮದ ಮತದಾರರ ಯಾದಿಯಲ್ಲಿ ದಾಖಲಿರುತ್ತದೆ. ಇದರಿಂದ 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿ ಎಂಬುದು ಸ್ಪಷ್ಟ. ಡಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಸದರಿ ಸಂಗತಿಗಳನ್ನು ಒಪ್ಪಿಕೊಂಡಿರುತ್ತಾರೆ. ಇದರಿಂದ 1 ನೇ ಪ್ರತಿವಾದಿಯು ಮೃತ ಕಲ್ಲಪ್ಪನ ಹೆಂಡತಿ ಎಂಬುವುದು ರುಜುವಾತು ಆಗುತ್ತದೆ. ನಿ.ಪಿ.11 ರಲ್ಲಿರುವ ಕ್ರಮ ಸಂ.707 ರಲ್ಲಿ ಶಾಂತವ್ವ ಕೋಟಿ ಅಂದರೆ1 ನೇ

ಪ್ರತಿವಾದಿಯರ ಹೆಸರು ಇರುವುದನ್ನು ಒಪ್ಪಿಕೊಂಡಿರುತ್ತಾರೆ. ನಿ.ಪಿ.12 ಪ್ರತಿವಾದಿಗೆ ನೀಡಿದ ನ್ಯಾಯಾಲಯದ ಸಮನ್ಸ ಪ್ರತಿ.

23. ಪಿ.ಡಬ್ಲೂ.1 ರವರ ಪಾಟೀ ಸವಾಲನ್ನು ಪರಿಶೀಲಿಸಲಾಗಿ ದಾವಾ ಸಲ್ಲಿಸುವ ಮುಂಚೆ ನನ್ನ ತಾಯಿನ್ನು ವಿಚಾರಿಸಿಲ್ಲ, ಪ್ರತಿವಾದಿ ಸಲ್ಲಿಸಿದ ಪ್ರತಿವಾದದ ಬಗ್ಗೆ ನೋಡಿಲ್ಲ. ತನ್ನ ತಾಯಿ ಕಲ್ಲಪ್ಪನ ವಿರುದ್ದ ಜೀವನಾಂಶ ಕೋರಿ ಅರ್ಜಿ ಸಲ್ಲಿರುವ ಬಗ್ಗೆ ಗೊತ್ತಿಲ್ಲ. ನಮ್ಮ ತಾಯಿ ಹಾಗೂ ಕಲ್ಲಪ್ಪ ಸಂಸಾರ ಮಾಡಿದ್ದರು ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ, ಕೂಡಿ ವಾಸವಾದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದು ತಿಳಿಸಿರುತ್ತಾರೆ.

24. ಪಿ.ಡಬ್ಲೂ.1 ರವರು ಮುಂದುವರೆದ ಪಾಟೀ ಸವಾಲಿನಲ್ಲಿ 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪನ ಮಧ್ಯ ಮೇಲ್ನನವಿ ವಿಷಯ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ತನ್ನ ಹಾಗೂ ತನ್ನ ತಾಯಿಯ ಮಧ್ಯ ಒಳ್ಳೆಯ ಸಂಬಂಧ ಇದೆ ಎಂದು ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ತನ್ನ ತಾಯಿ ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ತವರು ಮನೆ ದುಮ್ಮವಾಡದಲ್ಲಿ ವಾಸವಾಗಿರುವುದನ್ನು ಅಲ್ಲಗಳೆದಿರುತ್ತಾರೆ. ಪಿ.ಡಬ್ಲೂ.1 ರವರು ಪಾಟೀ ಸವಾಲಿನಲ್ಲಿ 2021 ರಲ್ಲಿ ಪ್ರೀತಿಸಿ ಧರ್ಮಸ್ಥಳದಲ್ಲಿ ಮದುವೆ ಆಗಿರುತ್ತೇನೆ. ಮದುವೆ ಆಮಂತ್ರಣ ಪತ್ರ ತಯಾರಿಸಿರಲಿಲ್ಲ ಎಂದು ತಿಳಿಸಿರುತ್ತಾರೆ. ಬಿ ಗುಡಿಹಾಳ ಗ್ರಾಮದಲ್ಲಿ ಮದುವೆಗೆ ಮುಂಚೆ ವಾಸವಾಗಿದ್ದೆ ಎಂದು ತಿಳಿಸಿರುತ್ತಾರೆ. ತಮ್ಮ ತಂದೆ ಸುಧಾ ಇವರ ಜೊತೆಗೆ ವಾಸವಾಗಿದ್ದಿರಬಹುದು. ಈ ಬಗ್ಗೆ ವಿಚಾರಿಸಿಲ್ಲ. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲೂ.1 ರವರು, ''ನಾನು ಕೆಳಗಿನ ಜಾತಿಯವನನ್ನು ಮದುವೆ ಆಗಿದ್ದರಿಂದ ನನ್ನನ್ನು ಹೆದರಿಸಿ, ಬೆದರಿಸಿದ್ದರಿಂದ

ನಾನು ತಂದೆ ಮನೆಯೊಂದಿಗೆ ಸಂಪರ್ಕ ಹೊಂದಿರಲಿಲ್ಲ" ಎಂದು ತಿಳಿಸಿರುತ್ತಾರೆ.

25. ಮುಂದುವರೆದ ಪಾಟೀ ಸವಾಲಿನಲ್ಲಿ ಕಲ್ಲಪ್ಪನ ಜೀವಿತ ಕಾಲದಲ್ಲಿ 2 ರಿಂದ 4 ನೇ ಪ್ರತಿವಾದಿಯರು ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿದ್ದರು ಎಂದು ಸೂಚಿಸಿದ್ದು ಪಿ.ಡಬ್ಲೂ.1 ರವರು "ನಾನೇ ಜೊಪಾನ ಮಾಡಿದ್ದೇನೆ" ಎಂದು ತಿಳಿಸಿರುತ್ತಾರೆ. ಇದನ್ನು ಪ್ರತಿವಾದಿಯರು ಎಲ್ಲಿಯೂ ಅಲ್ಲಗಳೆದಿರುವುದಿಲ್ಲ. ಅದೇ ರೀತಿ, ಆ ಸಮಯದಲ್ಲಿ ಈ ಬಗ್ಗೆ ನಮ್ಮ ತಂದೆಯನ್ನು ವಿಚಾರ ಮಾಡಿಲ್ಲ ಏಕೆಂದರೆ ಅವರು ನಮ್ಮೊಂದಿಗೆ ಚೆನ್ನಾಗಿದ್ದರು ಎಂದು ತಿಳಿಸಿರುತ್ತಾರೆ. ಇದರಿಂದ 2 ರಿಂದ 4 ನೇ ಪ್ರತಿವಾದಿಯರ ಪೋಷಣೆಯನ್ನು ಸಹ ವಾದಿಯೇ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಅದೇ ರೀತಿ ತಮ್ಮ ತಂದೆ ಮರಣ ಹೊಂದಿದ ನಂತರ ಶವ ಸಂಸ್ಕಾರಕ್ಕೆ ಹೋಗಿದ್ದು 2 ನೇ ಪ್ರತಿವಾದಿ ಕ್ರಿಯಾ ಕರ್ಮ ಮಾಡಿದ್ದನ್ನು ಒಪ್ಪಿಕೊಂಡಿರುತ್ತಾರೆ. ನಮ್ಮ ತಂದೆ ಮರಣ ಹೊಂದಿದ ನಂತರ 2 ರಿಂದ 4 ನೇ ಪ್ರತಿವಾದಿಯರ ಹೆಸರುಗಳು ಉತಾರುಗಳಲ್ಲಿ ದಾಖಲಾಗಿರುತ್ತವೆ ಆಗ ತನಗೆ ಗೊತ್ತಿರಲಿಲ್ಲ ಎಂದು ತಿಳಿಸಿರುತ್ತಾರೆ. ಇನ್ನೂಳಿದಂತೆ 1 ನೇ ಪ್ರತಿವಾದಿ ತನ್ನ ಸೋದರಮಾವ ಕಲ್ಲಪ್ಪನನ್ನು ಮದುವೆ ಆಗಿರುತ್ತಾರೆ. ಈ ವಿಷಯ ತನಗೆ ಗೊತ್ತಿದೆ ಎಂದು ತಿಳಿಸಿರುತ್ತಾರೆ. ಸದರಿ ಸಂಗತಿಯಿಂದ 1 ನೇ ಪ್ರತಿವಾದಿಯು ತನ್ನ ಸೋದರ ಮಾವ ಕಲ್ಲಪ್ಪನನ್ನು ಮದುವೆಯಾಗಿದ್ದರು ಎಂಬುದು ಸ್ಪಷ್ಟ. ಮುಂದುವರಿದ ಪಾಟೀ ಸವಾಲಿನಲ್ಲ, 1 ನೇ ಪ್ರತಿವಾದಿಯನ್ನು ಕಲ್ಲಪ್ಪ ಎಂದೂ ಮದುವೆ ಆಗಿರುವುದಿಲ್ಲಎಂಬುದನ್ನು ಅಲ್ಲಗಳೆದಿರುತ್ತಾರೆ. ಸುಧಾ ಮಾತ್ರ ಕಲ್ಲಪ್ಪನ ಹೆಂಡತಿ ಎಂಬುದನ್ನು ಅಲ್ಲಗಳೆದಿರುತ್ತಾರೆ. ವಾದಿಯು 2 ರಿಂದ 4 ನೇ ಪ್ರತಿವಾದಿ ಹಾಗೂ ತಮ್ಮ ತಂದೆಯ ಜೊತೆಗೆ ಕಳೆದ ದಿನಗಳನ್ನು ಕೂಡಾ ನೆನಪಿಸಿಕೊಂಡಿರುತ್ತಾರೆ.

ಪಾಟೀ ಸವಾಲಿನಲ್ಲಿ ಪಿ.ಡಬ್ಲೂ.1 ರವರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಸ್ಪಷ್ಟ ಹಾಗೂ ದೃಢವಾಗಿ ಉತ್ತರಿಸಿದ್ದು, ತನಗೆ ಗೊತ್ತಿರುವ ಎಲ್ಲ ಸಂಗತಿಗಳನ್ನು ತಿಳಿಸಿರುತ್ತಾರೆ. ಸದರಿಯವರ ಸಾಕ್ಷ್ಯದ ದೃಡತೆಯನ್ನು ಕುಗ್ಗಿಸುವಂತಹ ಯಾವುದೇ ಅಂಶಗಳು ಪಾಟೀ ಸವಾಲಿನಲ್ಲಿ ಇರುವುದಿಲ್ಲ. ಸದರಿಯವರು ಅತ್ಯಂತ ಸ್ಪಷ್ಟವಾಗಿ ತಮ್ಮ ತಂದೆ ಕಲ್ಲಪ್ಪ ಹಾಗೂ 1 ನೇ ಪ್ರತಿವಾದಿಯ ವೈವಾಹಿಕ ಸಂಬಂಧದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಪೂರಕವಾಗಿ ವಾದಿ ಹಾಜರುಪಡಿಸಿದ ದಾಖಲೆಗಳು ಸದರಿ ಸಂಗತಿಗಳನ್ನು ದೃಢ ಪಡಿಸುತ್ತವೆ.

26. ಉತಾರುಗಳಲ್ಲಿರುವ 2 ರಿಂದ 4 ನೇ ಪ್ರತಿವಾದಿಯರ ಹೆಸರುಗಳು ಅವರಿಗೆ ಸಂಪೂರ್ಣ ಮಾಲಿಕತ್ವದ ಹಕ್ಕನ್ನು ನೀಡುವುದಿಲ್ಲ. ವಾದಿ ದಾವೆಯಲ್ಲಿ ತಿಳಿಸಿದಂತೆ ಕಲ್ಲಪ್ಪ ಹಾಗೂ 1 ನೇ ಪ್ರತಿವಾದಿಯ ಮಧ್ಯ ವಿರಸ ಬಂದಿದ್ದರಿಂದ 1 ನೇ ಪ್ರತಿವಾದಿಯು ತನ್ನ ತವರು ಮನೆಗೆ ಹೋಗಿದ್ದು ಅಲ್ಲಯೇ ವಾಸವಾಗಿರುತ್ತಾಳೆ. ವಾದಿಗೆ ಈಗ ಸುಮಾರು 50 ವರ್ಷ ವಯಸ್ಸು. 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪನ ಮದುವೆ ಸುಮಾರು 50 ವರ್ಷಗಳ ಹಿಂದೆ ವಾದಿ ಹುಟ್ಟುವ ಮುಂಚೆ ಆಗಿರುತ್ತದೆ. ಆದ್ದರಿಂದ 50 ವರ್ಷಗಳ ಹಿಂದೆ ಆದ ಮದುವೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ವಾದಿಯ ಪ್ರಕರಣವನ್ನು ನಂಬದೇ ಇರಲು ಸಾಧ್ಯವಿಲ್ಲ. 1 ನೇ ಪ್ರತಿವಾದಿ ಅನಕ್ಷರಸ್ಥ ಹೆಣ್ಣುಮಗಳು ಆಗಿದ್ದು ತನ್ನ ಗಂಡನಿಂದ ಪ್ರತ್ಯೇಕವಾಗಿ ವಾಸವಾಗಿರುದರಿಂದ ಗಂಡನ ಜೊತೆಗೆ ವಾಸವಾಗಿದ್ದ ಬಗ್ಗೆ ದಾಖಲೆಗಳನ್ನು ಅವರಿಂದ ನೀರಿಕ್ಷಿಸಲು ಸಾಧ್ಯವಿಲ್ಲ ಮೇಲಾಗಿ ವಾದಿ ಹಾಗೂ 1 ನೇ ಪ್ರತಿವಾದಿಯ ಮಧ್ಯದ ಸಂಬಂಧ ಸರಿ ಇರುವುದಿಲ್ಲ. ವಾದಿ ಕೆಳಗಿನ ಜಾತಿಯ ವ್ಯಕ್ತಿಯನ್ನು ಮದುವೆ ಆಗಿದ್ದಾಳೆ ಎಂದು 1 ನೇ ಪ್ರತಿವಾದಿ ಕೂಡ 2 ರಿಂದ 4 ನೇ

ಪ್ರತಿವಾದಿಯರನ್ನು ಬೆಂಬಲಿಸಿರಬಹುದಾದ ಸಾಧ್ಯತೆಯನ್ನು ಸಹ ಅಲ್ಲಗಳೆಯಲಾಗದು. ನಿ.ಪಿ.11 ಸಾರ್ವಜನಿಕ ದಾಖಲೆ ಆಗಿದ್ದು 1 ನೇ ಪ್ರತಿವಾದಿ ಕಲ್ಲಪ್ಪನ ಹೆಂಡತಿ ಎಂಬುವುದನ್ನು ತೋರ್ಪಡಿಸುತ್ತದೆ. ಆದ್ದರಿಂದ 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪ ಕೂಡಿ ಸಂಸಾರ ಮಾಡಿದ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದು ಇಡೀ ಪ್ರಕರಣವನ್ನು ನಂಬದೇ ಇರಲು ಸಾಧ್ಯವಿಲ್ಲ. ಪ್ರೀತಿಸಿ ಬೇರೆ ವ್ಯಕ್ತಿ ಅಂದರೆ ಕೆಳಜಾತಿಯ ವ್ಯಕ್ತಿಯನ್ನು ಮದುವೆಯಾಗಿದ್ದಾರೆ ಎಂಬ ಪ್ರಮುಖ ಕಾರಣ ಹಾಗೂ ಆಸ್ತಿ ತಮ್ಮ ಕೈಬಿಟ್ಟು ಹೊಗುತ್ತದೆ ಎಂಬ ಕಾರಣಕ್ಕಾಗಿ ವಾದಿಯ ಜೊತೆಗಿನ ಸಂಬಂಧವನ್ನು 2 ರಿಂದ 4 ನೇ ಪ್ರತಿವಾದಿಯರು ಅಲ್ಲಗಳೆಯುತ್ತಿದ್ದಾರೆ, ಇದು ದುರುಂತ. ಇದೇ ಕಾರಣಕ್ಕಾಗಿ ವಾದಿ ತನ್ನ ಪರ ತನ್ನ ಹೆತ್ತ ತಾಯಿ 1 ನೇ ಪ್ರತಿವಾದಿಯನ್ನು ಕೂಡಾ ವಿಚಾರಣೆ ಮಾಡಲು ಸಾಧ್ಯವಾಗಿಲ್ಲ. ವಾದಿ ಕೆಳಗಿನ ಸಮಾಜದ ವ್ಯಕ್ತಿಯನ್ನು ಮದುವೆಯಾಗಿದ್ದಾಳೆ ಎಂಬ ಒಂದೇ ಕಾರಣಕ್ಕಾಗಿ ಸಂಬಂಧಿಕರು, ಗ್ರಾಮಸ್ಥರು ವಾದಿ ಪರ ಯಾರು ಸಾಕ್ಷಿ ನುಡಿಯಲು ಮುಂದೆ ಬರುತ್ತಿಲ್ಲ ಎಂಬುದು ಗೊತ್ತಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯವನ್ನು ನೀರಿಕ್ಷಿಸಲಾಗುವುದಿಲ್ಲ.

27. ಪ್ರತಿವಾದಿಯರ ಪರ ಮಂಡಿಸಿದ ಸಾಕ್ಷ್ಯವನ್ನು ಪರಿಶೀಲಿಸಿದೆನು. 2 ರಿಂದ 4 ನೇ ಪ್ರತಿವಾದಿಯರು ತಮ್ಮ ವಾದಕ್ಕೆ ಪೂರಕವಾಗಿ 2 ನೇ ಪ್ರತಿವಾದಿಯನ್ನು ಡಿ.ಡಬ್ಲೂ.1 ಎಂದು ವಿಚಾರಣೆ ಮಾಡಿಕೊಂಡಿದ್ದು ತನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದ ಪತ್ರದಲ್ಲಿಯ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಪ್ರತಿವಾದಿಯರು ಗುರುತಿಸಿಕೊಂಡ ದಾಖಲೆಗಳನ್ನು ಪರಿಶೀಲಸಲಾಗಿ ನಿ.ಡಿ.1 ಪಡಿತರ ಚೀಟಿ, ಅದರಲ್ಲಿ ಮೃತ ಕಲ್ಲಪ್ಪ ಪೋತಿ ಯಜಮಾನ ಹಾಗೂ ಸುಧಾ ಪತ್ನಿ

ಹಾಗೂ 2 ನೇ ಪ್ರತಿವಾದಿ ಮಗ ಎಂದು ನಮೂದಿಸಲಾಗಿದೆ. ನಿ.ಡಿ.2 ಕುಟುಂಬ ಪಡಿತರ ಚೀಟಿ, ಅದರಲ್ಲಿ ಶಾಂತವ್ವ ನವಲೂರ ಸಾಃ ದುಮ್ಮವಾಡ ಎಂದು ನಮೂದಿಸಲಾಗಿದೆ. ನಿ.ಡಿ.3 ರಿಂದ 5, 2 ರಿಂದ 4 ನೇ ಪ್ರತಿವಾದಿಯರ ಶಾಲಾ ಪ್ರಮಾಣ ಪತ್ರಗಳು.

28. ನಿಡಿ-6 ಕ್ರಿಮಿನಲ್ ರಿವಿಜನ್ ರಜಿಸ್ಟರ್ ಪ್ರತಿ ಅದರಲ್ಲಿ ಕ್ರಮ ಸಂಖ್ಯೆ 245/08 ರ ದಿಃ 15-12-2008 ರ ಉಲ್ಲೇಖವನ್ನು ಪರಿಶೀಲಿಸಿದಾಗ ಕಲ್ಲಪ್ಪ ಕೋಟಿ ಇವರು ಶಾಂತವ್ವ ಅಂದರೆ 1 ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಿದ ಕ್ರಿಮಿನಲ್ ಮೇಲನ್ಮವಿ ಅರ್ಜಿ ಪುರಸ್ಕೃತಗೊಂಡು ಜೀವನಾಂಶ ಕೋರಿ ಸಲ್ಲಿಸಿದ ಕ್ರಿಮಿನಲ್ ಮಿಸ್ಲೆನಿಯಸ್ ನಂ. 67-95 ರ ದಿಃ 6-11-2008 ರ ಆದೇಶವನ್ನು ವಜಾಗೊಳಿಸಲಾಗಿದೆ ಎಂದು ಸ್ಪಷ್ಟವಾಗುತ್ತದೆ. ನಿಡಿ-7 ಮಾನ್ಯ ಜಿಲ್ಲಾ ನ್ಯಾಯಾಲಯದ ಕ್ರಿಮಿನಲ್ ರಜಿಸ್ಟರ ನಂ. 14 ರ ಪ್ರತಿ, ಅದರಲ್ಲಿ ಕ್ರಿಮಿನಲ್ ರಿವಿಜನ್ ಪೀಟಿಷನ್ ನಂ. 245-2008 ರ ದಾಖಲೆಗಳನ್ನು ನಾಶ ಪಡಿಸಿದ ಬಗ್ಗೆ ಉಲ್ಲೇಖಿಸಲಾಗಿದೆ.

29. ನಿ.ಡಿ.8 ಕುಟುಂಬ ಪಡಿತರ ಚೀಟಿಯ ಸ್ವಿಕೃತ ಪ್ರತಿ ಅದರಲ್ಲಿ ಸುಧಾ ಹಾಗೂ 2 ನೇ ಪ್ರತಿವಾದಿ ಹಾಗೂ ಆತನ ಹೆಂಡತಿ ಮಕ್ಕಳ ಹೆಸರು ದಾಖಲಿರುತ್ತದೆ. ನಿ.ಡಿ.9 ಆಧಾರ ಕಾರ್ಡ ಪ್ರತಿ, ನಿ.ಡಿ.10 ವಿವಾಹ ಆಮಂತ್ರಣ ಪತ್ರಿಕೆ, ನಿ.ಡಿ.11 ಸಂಯುಕ್ತ ಕರ್ನಾಟಕ ಪತ್ರಿಕೆಯವರು ನೀಡಿದ ದಿನಾಂಕ 30-10-2025 ರ ರಶೀದಿ, ನಿ.ಡಿ.12-2002 ರ ಮತದಾರ ಪಟ್ಟಿ. ನಿ.ಡಿ.13 ರಿಂದ 16 ಗ್ರಾಮ ಪಂಚಾಯತಿ ನೀಡಿದ ಸಾಮಾನ್ಯ ರಶೀದಿಗಳು.

30. ಡಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಶಾಂತವ್ವ ಇವರು

ಕಲ್ಲಪ್ಪ ನ ಹೆಂಡತಿ ಎಂದು ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಶಾಂತವ್ವ ಕಲ್ಲಪ್ಪನ ಜೊತೆಗೆ ಬಾಳ್ವೆ ಮಾಡಿಲ್ಲ ಎಂದು ಜೀವನಾಂಶ ಅರ್ಜಿ ವಜಾಗೊಂಡಿರುವುದನ್ನು ಅಲ್ಲಗಳೆದು ಹೆಂಡತಿ ಅಲ್ಲ ಎಂದು ವಜಾಗೊಂಡಿದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಎಲ್ಲಿಯೂ ಸ್ಪಷ್ಟತೆ ಇರುವುದಿಲ್ಲ. ಒಂದು ವೇಳೆ ಪ್ರತಿವಾದಿಯರು ವಾದಿಸಿದಂತೆ ಶಾಂತವ್ವ ಕಲ್ಲಪ್ಪನ ಹೆಂಡತಿ ಅಲ್ಲ ಎಂದಾದರೆ ದಾಖಲೆಗಳನ್ನು ಹಾಜರುಪಡಿಸಬಹುದಾಗಿತ್ತು. ಡಿ.ಡಬ್ಲೂ.1 ರವರು ತನ್ನ ಪಾಟೀ ಸವಾಲಿನಲ್ಲಿ ಶಾಂತವ್ವ ಹಾಗೂ ಕಲ್ಲಪ್ಪನ ವೈಹಾಹಿಕ ಜೀವನಕ್ಕೆ ಸಂಬಂಧಿಸಿದಂತೆ ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಹಾರಿಕೆಯ ಉತ್ತರ ನೀಡಿರುತ್ತಾರೆ. ನಿ.ಪಿ.11 ರಲ್ಲಿ 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಇತ್ತೀಚಿಗೆ ದಾಖಲಿಸಿಕೊಂಡಿದ್ದಾರೆ ಎಂದು ತಿಳಿಸಿದ್ದು ಅದನ್ನು ಎಲ್ಲಿಯೂ ಪಶ್ನಿಸಿರುವುದಿಲ್ಲ. ಅದೇ ರೀತಿ ಮುಂದುವರೆದ ಪಾಟೀ ಸವಾಲಿನಲ್ಲಿ, ತನ್ನ ತಂದೆ ಸ್ವಾತ್ಯಂತ್ರ ಹೋರಾಟಗಾರನಾಗಿದ್ದು ಆತನಿಗೆ ಪ್ರತಿ ತಿಂಗಳು ಪಿಂಚಣಿ ಬರುತಿತ್ತು ಎಂದು ಒಪ್ಪಿಕೊಂಡಿರುತ್ತಾರೆ. ತನ್ನ ತಂದೆ ಮರಣದ ನಂತರ ಪಿಂಚಣಿ ಯಾರು ಪಡೆಯುತ್ತಿದ್ದಾರೆ ಎಂದು ಗೊತ್ತಿಲ್ಲ, ಈ ಬಗ್ಗೆ ಏನಾಗಿದೆ ಎಂದು ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದ ಪಾಟೀ ಸವಾಲಿನಲ್ಲಿ, ಬ್ಯಾಂಕಿನವರು ವಾರಸಾ ಪ್ರಮಾಣ ಪತ್ರ ಹಾಜರುಪಡಿಸುವಂತೆ ಕೇಳಿದ್ದು ಈ ಬಗ್ಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದು ಹೇಳಿರುತ್ತಾರೆ. ವಾದಿ, 1 ನೇ ಪ್ರತಿವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರು ವಾರಸಾ ಕೋರಿ ಅರ್ಜಿ ಸಲ್ಲಿಸಿದ್ದು, ಕಲ್ಲಪ್ಪನಿಗೆ 2 ಜನ ಹೆಂಡತಿಯರು ಇರುವುದರಿಂದ ಕಂದಾಯ ಅಧಿಕಾರಿಗಳು ವಾರಸಾ ಪ್ರಮಾಣ ಪತ್ರ

ನೀಡಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ಹೇಳಿರುತ್ತಾರೆ. ಈ ಮೂಲಕ ಡಿ.ಡಬ್ಲ್ಯೂ.1 ರವರು ತನ್ನ ಮೃತ ತಂದೆ ಕಲ್ಲಪ್ಪನಿಗೆ 2 ಜನ ಹೆಂಡತಿಯರು ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ. ಪ್ರತಿವಾದ ಪತ್ರದಲ್ಲಿ ಎಲ್ಲಿಯೂ ಕೂಡಾ ತನ್ನ ತಾಯಿ ಸುಧಾ ಮೊದಲನೆ ಹೆಂಡತಿ ಎಂದು ಎಲ್ಲಿಯೂ ತಿಳಿಸಿರುವುದಿಲ್ಲ. ವಾದಿ ಹಾಗೂ 2 ರಿಂದ 4 ಪ್ರತಿವಾದಿಯರ ವಯಸ್ಸನ್ನು ಪರಿಗಣಿಸಿದಾಗಲೂ ಸಹ ವಾದಿ ವಯಸ್ಸಿನಲ್ಲಿ ಹಿರಿಯಳು ಎಂಬುವುದು ಸ್ಪಷ್ಟ. ಮೆಲನೋಟಕ್ಕೆ 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿ ಆಗಿದ್ದು ಸದರಿ ಯವರ ಮಧ್ಯ ವಿವಾದ ಉಂಟಾಗಿದ್ದರಿಂದ 1 ನೇ ಪ್ರತಿವಾದಿಯು ಗಂಡನನ್ನು ಬಿಟ್ಟು ತವರು ಮನೆಯಲ್ಲಿಯೇ ವಾಸವಾಗಿರುತ್ತಾಳೆ. ಆ ಸಮಯದಲ್ಲಿ ವಾದಿಗೆ ಜನ್ಮ ನೀಡಿರುತ್ತಾಳೆ. 1 ನೇ ಪ್ರತಿವಾದಿ ತವರು ಮನೆ ಧುಮ್ಮವಾಡ ಗ್ರಾಮದಲ್ಲಿ ವಾಸವಾಗಿದ್ದು, ವಾದಿ ಅಲ್ಲಿಯೇ ವಿದ್ಯಾಬ್ಯಾಸ ಮಾಡಿರುತ್ತಾರೆ. ಆದರೆ ಶಾಲಾ ದಾಖಲೆಗಳಲ್ಲಿ ವಾದಿಯ ತಂದೆಯ ಹೆಸರು ಕಲ್ಲಪ್ಪ ಕೋಟಿ ಎಂದು ನಮೂದಿಸಲಾಗಿದೆ. 2 ರಿಂದ 4 ನೇ ಪ್ರತಿವಾದಿಯರು ವಾದಿ ಹಾಗೂ 1 ನೇ ಪ್ರತಿವಾದಿಯ ಕಾನೂನು ಬದ್ಧ ಹಕ್ಕನ್ನು ಮುಳುಗಿಸುವ ಸಲುವಾಗಿ ಸದರಿಯವರು ಕಲ್ಲಪ್ಪನಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದು ಸುಳ್ಳು ವಾದ ಮಂಡಿಸಿರುವುದು ಸ್ಪಷ್ಟ ವಾಗುತ್ತದೆ. ಡಿ.ಡಬ್ಲ್ಯೂ.1 ರವರ ಸಾಕ್ಷ್ಯದಲ್ಲಿ ಸ್ಪಷ್ಟತೆ ಹಾಗೂ ದೃಡತೆ ಕಂಡುಬರುವುದಿಲ್ಲ. ಆದ್ದರಿಂದ ಸದರಿ ಯವರ ಸಾಕ್ಷ್ಯ ನಂಬಲರ್ಹವಲ್ಲ ಎಂದು ಪರಿಗಣಿಸುತ್ತೇನೆ.

31. 2 ರಿಂದ 4 ನೇ ಪ್ರತಿವಾದಿಯರು ತಮ್ಮ ವಾದಕ್ಕೆ ಪೂರಕವಾಗಿ ರಾಮಪ್ಪ ಎಮ್ಮೆಟ್ಟಿ ಎನ್ನುವವರನ್ನು ಡಿ.ಡಬ್ಲ್ಯೂ.2 ಎಂದು ವಿಚಾರಣೆ

ಮಾಡಿಕೊಂಡಿದ್ದು, ಸದರಿ ಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾವು ಗುಡಿಹಾಳ ಗ್ರಾಮದ ನಿವಾಸಿ ಆಗಿದ್ದು, 1 ರಿಂದ 4 ನೇ ಪ್ರತಿವಾದಿಯರ ಪರಿಚಯ ಇರುತ್ತದೆ. 2 ರಿಂದ 4 ನೇ ಪ್ರತಿವಾದಿಯ ತಂದೆ ಸುಧಾ ಎನ್ನುವವಳನ್ನು ಮದುವೆ ಆಗಿದ್ದು ಅವರ ದಾಪಂತ್ಯ ದಿಂದ 2 ರಿಂದ 4 ನೇ ಪ್ರತಿವಾದಿಯರು ಜನಿಸಿರುತ್ತಾರೆ. ಕಲ್ಲಪ್ಪನ ಮನೆಯ ಎದುರಿನ ಓಣಿಯಲ್ಲಿ ತನ್ನ ಮನೆ ಇದ್ದು ಕಲ್ಲಪ್ಪ ಸುಧಾ ಇವರೊಂದಿಗೆ ಒಟ್ಟಿಗೆ ವಾಸವಾಗಿದ್ದ. ಸುಧಾ ಇವರು ಕಲ್ಲಪ್ಪನ ಹೆಂಡತಿ ಅವರ ತವರು ಮನೆ ವೀರಾಪೂರ. ಮುಂದುವರೆದು, 1 ನೇ ಪ್ರತಿವಾದಿ ಶಾಂತವ್ವ ಕಲ್ಲಪ್ಪನ ವಿರುದ್ದ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯಲ್ಲಿ ಕಲ್ಲಪ್ಪನ ಪರ ಸಾಕ್ಷಿ ನುಡಿದಿರುತ್ತೇನೆ. ಕಲ್ಲಪ್ಪ ಶಾಂತವ್ವಳನ್ನು ಎಂದು ಮದುವೆ ಆಗಿರಲಿಲ್ಲ ಹಾಗೂ ಒಟ್ಟಾಗಿ ಜೀವನ ನಡೆಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ವಾದಿ ಪರ ಪಾಟೀ ಸವಾಲಿನಲ್ಲಿ ದಾವೆ ಯಾರು ಸಲ್ಲಿಸಿದ್ದಾರೆ ಗೊತ್ತಿಲ್ಲ. ಎಂದು ಹೇಳಿ ನಂತರ ನಾಗಪ್ಪ ಸಲ್ಲಿಸಿದ್ದಾನೆ ಎಂದು ತಿಳಿಸಿರುತ್ತಾರೆ. ವಾದಿ ಯಾವ ಮಾಗನಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗಳ ನಂಬರ ಗೊತ್ತಿಲ್ಲ. ನಾಗಪ್ಪ ಕೇಳಿದ್ದರಿಂದ ಸಾಕ್ಷಿ ಹೇಳುತ್ತಿದ್ದೇನೆ. ನಾಗಪ್ಪನ ತಂದೆ ಕಲ್ಲಪ್ಪ ನಡತೆಯಿಂದ ಅಣ್ಣ ಅಥವಾ ತಮ್ಮ ಆಗಬೇಕು ನಾವು ಒಂದೇ ಜಾತಿಯವರು ಎಂದು ತಿಳಿಸಿರುತ್ತಾರೆ. ಮುಂದುವರೆದ ಪಾಟೀ ಸವಾಲಿನಲ್ಲಿ ನಾಗಪ್ಪ ಹಾಗೂ ಶಾಂತವ್ವ ಯಾವ ಮನೆಯಲ್ಲಿ ವಾಸವಾಗಿದ್ದಾರೆ, ಅದರ ನಂಬರ ಗೊತ್ತಿಲ್ಲ. ಯಾವ ಊರಿನಲ್ಲಿ ವಾಸವಾಗಿದ್ದಾರೆ ಗೊತ್ತಿಲ್ಲ. ದಾವೆಯನ್ನು ಕಲ್ಲಪ್ಪನ ತಾಯಿಯ ತಮ್ಮನ ಮಗಳು ಸಲ್ಲಿಸಿದ್ದಾಳೆ. ಯಾವ ಪರಿಹಾರ ಕೋರಿದ್ದಾರೆ ಎಂದು ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಡಿ.ಡಬ್ಲ್ಯೂ.2 ರವರ ಮೌಖಿಕ ಸಾಕ್ಷ್ಯ ದಾಖಲೆಗಳಿಗೆ

ವ್ಯತಿರಿಕ್ತವಾಗಿದ್ದು, ಮೇಲನೋಟಕ್ಕೆ 2 ರಿಂದ 4 ನೇ ಪ್ರತಿವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸಾಕ್ಷಿ ಹೇಳುತ್ತಿದ್ದಾರೆ. ಆದರೆ ಸದರಿ ಯವರ ಸಾಕ್ಷ್ಯದಲ್ಲಿ ಯಾವುದೇ ಸತ್ಯಾಂಶ ಕಂಡುಬರುತ್ತಿಲ್ಲ. 2 ನೇ ಪ್ರತಿವಾಯ ಹೇಳಿಕೆ ಮೇರೆಗೆ ಸಾಕ್ಷಿ ನುಡಿಯುತ್ತಿದ್ದಾರೆ. ಡಿ.ಡಬ್ಲ್ಯೂ.2 ರವರ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳು ಇರುವುದಿಲ್ಲ. ಆದ್ದರಿಂದ, ಸದರಿಯವರ ಸಾಕ್ಷ್ಯ ನಂಬಲರ್ಹವಲ್ಲ ಎಂದು ಪರಿಗಣಿಸುತ್ತೇನೆ.

32. 2 ರಿಂದ 4 ನೇ ಪ್ರತಿವಾದಿಯರು ಎತ್ತಿದ ಪ್ರಮುಖ ವಾದ ಎಂದರೆ, 1 ನೇ ಪ್ರತಿವಾದಿ ಕಲ್ಲಪ್ಪನ ವಿರುದ್ದ ಜೀವನಾಂಶ ಕೋರಿ ಸಿವಿಲ್ ನ್ಯಾಯಾಲಯ ಕಲಘಟಗಿಯಲ್ಲಿ ಕ್ರೀಮಿನಲ್ ಮಿಸಲೆನಿಯಸ್ ನಂ.67/1995 ರಂತೆ ಅರ್ಜಿ ಸಲ್ಲಿಸಿದ್ದು ಸದರಿ ಆದೇಶ ವಿರುದ್ದ ಕಲ್ಲಪ್ಪ ಜಿಲ್ಲಾ ನ್ಯಾಯಾಲಯದಲ್ಲಿ ಕ್ರೀಮಿನಲ್ ಮೇಲ್ಮನವಿ ನಂ.245/2008 ನ್ನು ದಾಖಲಿಸಿದ್ದು ಸದರಿ ಅರ್ಜಿ ಪುರಸ್ಕೃತಗೊಂಡು ಜೀವನಾಂಶದ ಆದೇಶ ವಜಾಗೊಂಡಿರುತ್ತದೆ. ಪ್ರತಿವಾದಿಯರು ನಿ.ಡಿ. 6 ಮತ್ತು7 ರಂತೆ ಕ್ರಿಮಿನಲ್ ರಜಿಸ್ಟರಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಕಲ್ಲಪ್ಪ ಸಲ್ಲಿಸಿದ ಮೇಲ್ಮನವಿ ಅರ್ಜಿ ಪುರಸ್ಕೃತಗೊಂಡಿದ್ದು ಜೀವನಾಂಶದ ಆದೇಶ ರದ್ದಾಗಿರುತ್ತದೆ. ಪ್ರತಿವಾದಿಯರು ಸದರಿ ಆದೇಶದ ಪ್ರತಿ ಅಥವಾ ಮೇಲ್ಮನವಿ ಅರ್ಜಿಗಳನ್ನು ಹಾಜರುಪಡಿಸಿರುವುದಿಲ್ಲ. ಯಾವ ಉದ್ದೇಶದಿಂದ ಕಲ್ಲಪ್ಪ ಮೇಲ್ನವಿ ಸಲ್ಲಿಸಿದ್ದ ಎಂಬುದರ ಬಗ್ಗೆ ನಿ.ಡಿ.6 ಮತ್ತು 7 ರಿಂದ ಸ್ಪಷ್ಟವಾಗುವುದಿಲ್ಲ. ಆದ್ದರಿಂದ 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿ ಅಲ್ಲ ಎಂಬ ಸ್ಪಷ್ಟ ನಿರ್ದಾರಕ್ಕೆ ಬರಲು ಸಾಧ್ಯವಿಲ್ಲ. ಕಲ್ಲಪ್ಪ ಈತನು 1 ನೇ ಪ್ರತಿವಾದಿಯನ್ನು ನಿರ್ಲಕ್ಷಿಸದೆ ಇರುವುದರಿಂದ ಅರ್ಜಿ

ಪುರಸ್ಕೃತಗೊಂಡಿರಬಹುದು. ವಾದಿ ದಾವೆಯಲ್ಲಿ ಕೂಡಾ ಕಲ್ಲಪ್ಪ ಸುಧಾ ಎನ್ನುವವಳು ಕಲ್ಲಪ್ಪನ 2 ನೇ ಹೆಂಡತಿ ಎಂದು ಹೇಳಿಕೊಳ್ಳುತ್ತಿದ್ದಳು ಆದ್ದರಿಂದ 1 ನೇ ಪ್ರತಿವಾದಿ ತವರು ಮನೆಗೆ ಹೋಗಿ ವಾಸವಾಗಿದ್ದಾರೆ ಎಂದು ತಿಳಿಸಿರುತ್ತಾರೆ. ಈ ಸಂಗತಿಯನ್ನು ದಾಖಲೆಗಳೊಂದಿಗೆ ತಾಳೆ ಮಾಡಿ ನೋಡಲಾಗಿ 1 ನೇ ಪ್ರತಿವಾದಿಯು ತನ್ನನ್ನು ಬಿಟ್ಟುಹೋದ ನಂತರ ಕಲ್ಲಪ್ಪ 2 ನೇ ಮದುವೆ ಆಗಿರಬಹುದಾದ ಸಾಧ್ಯತೆಯನ್ನು ಸಹ ಅಲ್ಲಗಳೆಯಲಾಗದು. ಕಲ್ಲಪ್ಪ ಸಲ್ಲಿಸಿದ ಮೇಲ್ಮನವಿ ಪುರಸ್ಕೃತಗೊಂಡಿದೆ ಎಂದರೆ 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿ ಅಲ್ಲ ಎಂಬ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ. ಜೀವನಾಂಶ ಕೇಳಿದ ಅರ್ಜಿಗಳನ್ನು ಹಲವಾರು ಕಾರಣಗಳಿಂದ ವಜಾಗೊಳಿಸಬಹುದಾಗಿದೆ. ನಿ.ಡಿ.6 ಮತ್ತು 7 ರ ದಾಖಲೆಗಳು 2 ರಿಂದ 4 ನೇ ಪ್ರತಿವಾದಿಯರು ವಾದಿಸಿದಂತೆ 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿ ಅಲ್ಲ ಎಂದು ಮೇಲ್ಮನವಿ ಪುರಸ್ಕೃತಗೊಂಡಿದೆ ಎಂಬ ವಾದವನ್ನು ನಂಬಲಾಗದು.

33. ನಿ.ಡಿ.1 ರಿಂದ 5, 8 ರಿಂದ 10, ಮತ್ತು 17 ದಾಖಲೆಗಳು ಮೃತ ಕಲ್ಲಪ್ಪ ಸುಧಾ ಎನ್ನುವವರನ್ನು 2 ನೇ ವಿವಾಹವಾಗಿದ್ದು ಅವರ ವೈವಾಹಿಕ ಜೀವನದಿಂದಾಗಿ 2 ರಿಂದ 4 ನೇ ಪ್ರತಿವಾದಿಯರು ಜನಿಸಿದ್ದಾರೆ ಎಂದು ರುಜುವಾತಾಗುತ್ತದೆ. ಪ್ರತಿವಾದಿಯರು ಹಾಜರುಪಡಿಸಿದ ದಾಖಲೆಗಳು ವಾದಿ ಕಲ್ಲಪ್ಪನ ಮಗಳು ಅಲ್ಲ ಅಥವಾ 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿ ಅಲ್ಲ ಎಂಬ ನಿರ್ಧಾರಕ್ಕೆ ಬರಲು ಸೂಕ್ತವಾದ ದಾಖಲೆಗಳಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಿ.ಡಿ.11 ರ ಜೊತೆಗೆ ಹಾಜರುಪಡಿಸಿದ ಪತ್ರಿಕಾ ಪ್ರಕಟಣೆಯಿಂದ ವಾದಿ ಕಲ್ಲಪ್ಪನ ಮಗಳು ಹಾಗೂ 1 ನೇ ಪ್ರತಿವಾದಿಯು ಮೊದಲನೆಯ ಹೆಂಡತಿ ಎಂಬುವುದು

ರುಜುವಾತುಆಗುತ್ತದೆ. 2 ರಿಂದ 4 ನೇ ಪ್ರತಿವಾದಿಯರು ಮೇಲನೊಟಕ್ಕೆ ಮೃತ ಕಲ್ಲಪ್ಪ ಹಾಗೂ ವಾದಿ ಇವರು ತಂದೆ-ಮಗಳು ಅಲ್ಲ ಎಂಬುದರ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದು ವಾದಿ ಹಾಗೂ 1 ನೇ ಪ್ರತಿವಾದಿ ಕಲ್ಲಪ್ಪನ ಮಗಳು ಮತ್ತು ಹೆಂಡತಿ ಅಲ್ಲ ಎಂಬ ಸುಳ್ಳು ವಾದ ಮಂಡಿಸಿರುವುದು ಸ್ಪಷ್ಟವಾಗುತ್ತದೆ.

34. ಪ್ರತಿವಾದಿಯರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, 1 ನೇ ಪ್ರತಿವಾದಿಯು 1976 ರಲ್ಲಿ ಕಲ್ಲಪ್ಪ ಬೇರೆ ಮದುವೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಹಾಗೂ ತನಗೆ ಪದ್ಮವ್ವ ಎಂಬ ಹೆಣ್ಣು ಮಗು ಜನಿಸಿದೆ ಎಂದು ಈ ಹಿಂದೆ ಜಾಹಿರ ನೋಟಿಸಿನ ಮೂಲಕ ತಿಳಿಸಿದ್ದು, ಮೃತ ಕಲ್ಲಪ್ಪ ಇತನು 1 ನೇ ಪ್ರತಿವಾದಿಯನ್ನು ಮದುವೆ ಆದ ನಂತರ ಸಂಸಾರ ಮಾಡಲು ಕರೆದುಕೊಂಡು ಬಂದಿರುವುದಿಲ್ಲ ಆ ಸಮಯದಲ್ಲಿ 1 ನೇ ಪ್ರತಿವಾದಿಯು ವಾದಿಗೆ ಜನ್ಮ ನೀಡಿದ್ದಳು ಎಂಬುವುದು ಸ್ಪಷ್ಟವಾಗುತ್ತದೆ. ಪತ್ರಿಕಾ ಪ್ರಕಟಣೆಯ ಜಾಹಿರ ನೋಟಿಸ್ ನ್ನು ಪರಿಶೀಲಿಸಲಾಗಿ ಅದು ಈ ಕೆಳಗಿನಂತೆ ಇರುತ್ತದೆ.

**ಜಾಹೀರ ನೋಟಿಸು**

*ಕಲ್ಲಪ್ಪ ಚನ್ನಪ್ಪ ಕೋಟಿ ಸಾಃ ಗುಡಿಹಾಳ ಇವನು ನನ್ನನ್ನು ಲಗ್ನವಾಗಿ ೭-೮ ವರ್ಷಗಳಾದವು . ಬಾಣಂತಕೆಂದು ತವರು ಮನೆಗೆ ಕಳುಹಿಸಿದ್ದು ಈಗ ಪದ್ಮವ್ವ ಎಂಬ ಹೆಣ್ಣು ಮಗು ಆಗಿದೆ.*
*ಈಗ ನನ್ನನ್ನು ಕರೆದುಕೊಂಡು ಹೋಗದೆ 2 ನೇ ಲಗ್ನ ಮಾಡಿಕೊಳ್ಳುವ ಮತ್ತು ಆಸ್ತಿ ಮಾರಾಟ ಮಾಡುವ ಪ್ರಯತ್ನದಲ್ಲಿ ಇದ್ದದ್ದು ತಿಳಿದಿದೆ ಕಾರಣ ಅವನ ಜೊತೆಗೆ ಲಗ್ನ ಇಲ್ಲವೆ ನಮ್ಮ ಆಸ್ತಿ ವಿಚಾರದಲ್ಲಿ ಯಾರೂ ಯಾವ ವ್ಯವಹಾರವನ್ನು ಮಾಡಬಾರದು. ಒಂದು ವೇಳೆ ವ್ಯವಹಾರ ಮಾಡಿದರೆ ಲುಕ್ಸಾನಕ್ಕೆ ಪಾತ್ರರಾಗುವಿರಿ ಅಂತ ಕೊಟ್ಟ ನೋಟಿಸ.*

*ಈ ಎ.ಹೆ.ಗು ಶಾಂತವ್ವ ಕೋಂ ಕಲ್ಲಪ್ಪ ಕೋಟಿ ಸಾ: ಗುಡಿಹಾಳ*

ಈ ಮೇಲಿನ ಪ್ರಕಟಣೆಯನ್ನು ಪರಿಶೀಲಿಸಿದಾಗ 1 ನೇ ಪ್ರತಿವಾದಿಯು ಮದುವೆ ಆದ 7-8 ವರ್ಷಗಳ ನಂತರ ಬಾಣಂತನಕ್ಕೆ ಹೋದಾಗ ಪುನಃ ಕರೆದುಕೊಂಡು ಹೋಗಿರುವುದಿಲ್ಲ. ಆ ಸಮಯದಲ್ಲಿ ಸದರಿ ಯವರು ಪದ್ಮವ್ವ ಎನ್ನುವ ಹೆಣ್ಣುಮಗಳು ಅಂದರೆ ವಾದಿಗೆ ಜನ್ಮ ನೀಡಿದ್ದಳು ಎಂಬುವುದು ರುಜುವಾತಾಗುತ್ತದೆ. ಈ ಬಗ್ಗೆ ವಾದಿ ಪರ ವಕೀಲರು ಪತ್ರಿಕಾ ಪ್ರಕಟಣೆಯನ್ನು ದಿನಾಂಕ 26-02-1976 ರಂದು ಹೋರಡಿಸಿದ್ದು, ವಾದಿ ಜನ್ಮ ದಿನಾಂಕದ ಶಾಲಾ ದಾಖಲೆಯಲ್ಲಿ ಜನ್ಮ ದಿನಾಂಕ 04-05-1976 ಎಂದು ನಮೂದಿಸಿರುವುದು ಶಾಲಾ ದಾಖಲೆ ನಿ.ಪಿ.8 ರ ಬಗ್ಗೆ ಅನುಮಾನ ಉಂಟಾಗುತ್ತದೆ. ಸದರಿ ದಾಖಲೆ ಸೃಷ್ಟಿಸಿದ ದಾಖಲೆ ಎಂದು ವಾದಿಸಿರುತ್ತಾರೆ. ಈ ಹಂತದಲ್ಲಿ ಸ್ಪಷ್ಟ ಪಡಿಸುವುದೇನೆಂದರೆ, ಪತ್ರಿಕಾ ಪ್ರಕರಣೆಯನ್ನು ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದು ಕಾನೂನಿನ ಸುಸ್ಥಾಪಿತ ನಿಯಮ. ಪ್ರತಿವಾದಿಯರು ಸ್ವತಃ ಹಾಜರುಪಡಿಸಿದ ಪತ್ರಿಕಾ ಪ್ರಕಟಣೆಯಲ್ಲಿ 1 ನೇ ಪ್ರತಿವಾದಿ ಸ್ವತಃ ಜಾಹಿರ ನೋಟಿಸ ನೀಡಿದ್ದು ಅದರಲ್ಲಿ ತನಗೆ ಪದ್ಮವ್ವ ಎಂಬ ಹೆಣ್ಣು ಮಗಳು ಜನಿಸಿದ್ದಾಳೆ ಎಂದು ಅತ್ಯೆಂತ ಸ್ಪಷ್ಟವಾಗಿ ತಿಳಿಸಿರುತ್ತಾರೆ. 1 ನೇ ಪ್ರತಿವಾದಿಗೆ ಮಗು ಜನಿಸಿರುವುದು ಸ್ಪಷ್ಟ. ದಿನಾಂಕದ ಬಗ್ಗೆ ಸ್ವಲ್ಪ ಮಟ್ಟಿನ ಗೊಂದಲ ಇರುತ್ತದೆ. ಈ ಹಿಂದಿನ ಅಂದರೆ 1980-90 ರ ದಶಕದಲ್ಲಿ ತಂದೆ ತಾಯಿ ಅಶಿಕ್ಷಿತರಾಗಿದ್ದು ಮಕ್ಕಳನ್ನು ಶಾಲೆಗೆ ದಾಖಲಿಸುವ ಸಮಯದಲ್ಲಿ ಅನಕೂಲವಾಗುವ ದಿನಾಂಕವನ್ನು ನಮೂದಿಸಿಕೊಳ್ಳಲು ಶಿಕ್ಷಕರಿಗೇ ಸ್ವಾತಂತ್ರ

ನೀಡುತ್ತಿದ್ದರು. ಹೀಗಾಗಿ ಶಾಲಾ ದಾಖಲೆಯಲ್ಲಿ ಮಕ್ಕಳ ಜನ್ಮ ದಿನಾಂಕವನ್ನು ಶಾಲಾ ಶಿಕ್ಷಕರು ಸ್ವತಃ ತಮ್ಮ ಅನಕೂಲಕ್ಕೆ ತಕ್ಕಂತೆ ನಮೂದಿಸಿಕೊಳ್ಳುತ್ತಿದ್ದರು. ಈ ಬಗ್ಗೆ ಹಿಂದಿನ ಶಾಲಾ ದಾಖಲೆಯ ರಿಜಿಸ್ಟರಗಳಲ್ಲಿ ಒಂದೇ ದಿನಾಂಕ ಉಳ್ಳ ಸಾವಿರಾರು ವಿದ್ಯಾರ್ಥಿಗಳ ಜನ್ಮ ದಿನಾಂಕವನ್ನು ನೋಡಬಹುದು. ವಿದ್ಯಾರ್ಥಿಗಳ ಜನ್ಮ ದಿನಾಂಕವನ್ನು ಅಗತ್ಯಕ್ಕೆ ತಕ್ಕಂತೆ ಶಿಕ್ಷಕರು ನಮೂದಿಸುತ್ತಿದ್ದರು ಹಾಗೂ ಇದು ಸರ್ವಕಾಲಿಕ ಸತ್ಯ ಇದನ್ನು ಅಲ್ಲಗಳೆಯಲಾಗದು. ವಾದಿಯ ಶಾಲಾ ದಾಖಲೆಯಲ್ಲಿ ಜನ್ಮ ದಿನಾಂಕ ತಪ್ಪಾಗಿದೆ ಎಂದು ಅವಳನ್ನು 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪನ ಮಗಳು ಅಲ್ಲ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಈ ಬಗ್ಗೆ ಪ್ರತಿವಾದಿಯರಿಗೆ ಸಂದೇಹವಿದ್ದರೆ ಮಕ್ಕಳನ್ನು ಶಾಲೆಗೆ ದಾಖಲಿಸುವಾಗ ತುಂಬುವ ರಜಿಸ್ಟರ ಪ್ರತಿ ಅಥವಾ ಪ್ರವೇಶ ಅರ್ಜಿಯನ್ನು ಹಾಜರುಪಡಿಸುವ ಮೂಲಕ ಅದನ್ನು ಸಿದ್ದಪಡಿಸಬಹುದಾಗಿತ್ತು. ಕೇವಲ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಪ್ರಕರಣದಲ್ಲಿಯ ದಾಖಲೆಗಳಲ್ಲಿಯ ತಪ್ಪುಗಳ ಉಲ್ಲೇಖವನ್ನು ಪರಿಗಣಿಸಿ ವಾದಿಯ ಪ್ರಕರಣವನ್ನು ನಂಬದೇ ಇರಲು ಸಾಧ್ಯವಿಲ್ಲ.

35. 2 ರಿಂದ 4 ನೇ ಪ್ರತಿವಾದಿಯರು ವಾದಿಸಿದಂತೆ ವಾದಿಯು ಕಲ್ಲಪ್ಪನ ಮಗಳು ಅಲ್ಲ, 1 ನೇ ಪ್ರತಿವಾದಿ ಕಲ್ಲಪ್ಪನ ಹೆಂಡತಿ ಅಲ್ಲ ಎಂದಾದರೆ, ವಾದಿ ಯಾರ ಮಗಳು ? ಅವರ ತಂದೆ ತಾಯಿ ಯಾರು ? ಅವಳ ಊರು ? ಅದೇ ರೀತಿ 1 ನೇ ಪ್ರತಿವಾದಿ ಯಾರು ? ಅವರ ಮಗಳ ಯಾರು ? 1 ನೇ ಪ್ರತಿವಾದಿಗೆ ಯಾರ ಸಂಬಂಧದಿಂದ ಮಗು ಜನಿಸಿದೆ ಎನ್ನುವದನ್ನು ವಿವರಿಸುವ ಜವಾಬ್ದಾರಿ ಪ್ರತಿವಾದಿಯರ ಮೇಲೆ ಇರುತ್ತದೆ. ಈ ಬಗ್ಗೆ ಯಾವುದೇ ವಿವರಣೆಯನ್ನು ನೀಡದೆ ಕೇವಲ ಸಂಬಂಧವನ್ನು ಅಲ್ಲಗಳೆದ ಮಾತ್ರಕ್ಕೆ ಅದು ಅದರ ರುಜುವಾತಲ್ಲ. 2

ರಿಂದ 4 ನೇ ಪ್ರತಿವಾದಿಯರು ಒಬ್ಬ ಅಮಾಯಕ ಹೆಣ್ಣು ಮಗಳನ್ನು 'ಜಾರಜ' ಅಂದರೆ ವಿವಾಹೇತರ ಸಂಬಂಧದಿಂದ ಜನಿಸಿದ ಮಗಳು ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿವಾದಿಯರು ಹಾಜರುಪಡಿಸಿದ ಮತದಾರರ ಯಾದಿ, ಪತ್ರಿಕಾ ಪ್ರಕಟಣೆ ಇವುಗಳಲ್ಲಿ 1 ನೇ ಪ್ರತಿವಾದಿಯ ಹೆಸರು ಕಲ್ಲಪ್ಪನ ಹೆಂಡತಿ ಎಂದು ಅತ್ಯೆಂತ ಸ್ಪಷ್ಟವಾಗಿ ನಮೂದಿಸಲಾಗಿದೆ. ಸದರಿ ದಾಖಲೆಗಳನ್ನು ಕಲ್ಲಪ್ಪ ಅಥವಾ 2 ರಿಂದ 4 ನೇ ಪ್ರತಿವಾದಿಯರು ಇಲ್ಲಿಯವರೆಗೆ ಎಲ್ಲಿಯು ಪ್ರಶ್ನಿಸಿಲ್ಲ. ಇದರಿಂದ ಮೇಲನೋಟಕ್ಕೆ 2 ರಿಂದ 4 ನೇ ಪ್ರತಿವಾದಿಯರಿಗೆ ವಾದಿಯು ಕಲ್ಲಪ್ಪ ಹಾಗೂ 1 ನೇ ಪ್ರತಿವಾದಿಯ ವೈವಾಹಿಕ ಕಾನೂನು ಬದ್ಧ ಮಗಳು ಎನ್ನುವ ವಿಷಯ ಗೊತ್ತಿದ್ದರು ಕೂಡಾ ಈ ಬಗ್ಗೆ ಯಾವುದೇ ದಾಖಲೆಗಳು ವಾದಿಯ ಬಳಿ ಇಲ್ಲ ಎಂದು ಸಂಬಂಧವನ್ನು ಅಲ್ಲಗಳೆಯುವ ಮೂಲಕ ಸುಳ್ಳು ವಾದ ಮಂಡಿಸಿರುವುದು ಸ್ಪಷ್ಟವಾಗುತ್ತದೆ. 2 ರಿಂದ 4 ನೇ ಪ್ರತಿವಾದಿಯರ ವಾದದಲ್ಲಿ ಯಾವುದೇ ಹುರುಳಿಲ್ಲ.

36. ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡಬಾರದು ಎನ್ನುವ ದುರುದ್ದೇಶದಿಂದ ವಾದಿ ಹಾಗೂ 1 ನೇ ಪ್ರತಿವಾದಿಯ ಸಂಬಂಧವನ್ನು ಅಲ್ಲಗಳೆದಿರುವುದು ಸ್ಪಷ್ಟ. ನಾವು 21 ನೇ ಶತಮಾನದಲ್ಲಿ ಬದುಕುತ್ತಿದ್ದೇವೆ, ಮಾಹಿತಿ -ತಂತ್ರಜ್ಞಾನ, ಆಧುನಿಕತೆ ಎಲ್ಲಾ ಕ್ಷೇತ್ರಗಳಲ್ಲಿ ಜಗತ್ತಿನಲ್ಲಿ ಬದಲಾವಣೆ ಆಗಿದೆ ಎಂಬುವುದನ್ನು ಹೊರತುಪಡಿಸಿ ನಮ್ಮ ಸಮಾಜದಲ್ಲಿ ಇರುವ ಜನರು, ಜಾತಿ, ಮತ, ಪಂಥ, ಮೇಲು-ಕೀಳು ಇವುಗಳ ಮನಸ್ಥಿತಿ ಯಿಂದ ಜನರು ಇನ್ನೂ ಹೊರಬಂದಿಲ್ಲ ಎಂಬುದಕ್ಕೆ ಈ ಪ್ರಕರಣ ಸ್ಪಷ್ಟ ನಿದರ್ಶನ. ವಾದಿ ಕೆಳಗಿನ ಜಾತಿಯ ವ್ಯಕ್ತಿಯನ್ನು ಮದುವೆ ಆಗಿದ್ದಳೆ ಎಂಬ ಒಂದೇ ಕಾರಣಕ್ಕಾಗಿ ಅಮಾಯಕ

ಹೆಣ್ಣುಮಗಳ ಪರ ಸಂಬಂಧಿಕರು, ಗ್ರಾಮಸ್ಥರು, ಸ್ವತಃ ತಾಯಿ 1 ನೇ ಪ್ರತಿವಾದಿ ಯಾರೂ ಕೂಡಾ ಮುಂದೆ ಬಂದಿರುವುದಿಲ್ಲ. ಇದರಿಂದ ಜನರ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳ ಬಹುದಾಗಿದೆ.

37. 2 ರಿಂದ 4 ನೇ ಪ್ರತಿವಾದಿಯರ ಪರ ವಕೀಲರು ತಮ್ಮ ವಾದಕ್ಕೆ ಪೂರಕವಾಗಿ 1. ಅರ್ ಎಫ್ ಎ ನಂ. 100441/2019, 2. ಎ ಐ ಆರ್ 1977 ಕರ್ನಾಟಕ 115, 3. 1994 ಎ ಐ ಆರ್ 853 ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ. ಸದರಿ ತೀರ್ಪುಗಳನ್ನು ಪರಿಶೀಲಿಸಿದಾಗ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಅರ್ ಎಫ್ ಎ ನಂ. 100441/2019 ರಲ್ಲಿಯ ಪ್ರಕರಣದಲ್ಲಿ, 1 ರಿಂದ 3 ನೇ ವಾದಿಯರು ಮಕ್ಕಳು ಹಾಗೂ ಹೆಂಡತಿ 6 ನೇ ಪ್ರತಿವಾದಿ ಹಾಗೂ 1 ರಿಂದ 5 ನೇ ಪ್ರತಿವಾದಿಯರ ವಿರುದ್ದ ವಿಭಾಗ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ 1 ರಿಂದ 5 ನೇ ಪ್ರತಿವಾದಿಯರು ತಕರಾರು ಸಲ್ಲಿಸಿ 6 ನೇ ಪ್ರತಿವಾದಿಯೊಂದಿಗಿನ ಸಂಬಂಧವನ್ನು ಅಲ್ಲಗಳೆದಿರುತ್ತಾರೆ. 1 ಮತ್ತು 2 ನೇ ವಾದಿಯರ ತಂದೆ 6 ನೇ ಪ್ರತಿವಾದಿ ರಾಮಲಿಂಗಯ್ಯ ದಿಃ 06-01-1980 ರಲ್ಲಿ ಜನಿಸಿದ್ದು ಅದಕ್ಕೆ ಮುಂಚೆಯೇ 1 ನೇ ಪ್ರತಿವಾದಿ ಶ್ರೀಮತಿ ಪಾರ್ವತಿ ಮೂಲ ಪುರುಷನ ಹೆಂಡತಿ ದಿಃ 28-02-1979 ರಂದು ಟ್ಯುಬೆಕ್ಟಮಿ ಚಿಕಿತ್ಸೆಗೆ ಒಳಗಾಗಿರುತ್ತಾರೆ ಹಾಗೂ ಸದರಿ ಪ್ರಕರಣದಲ್ಲಿ 1 ರಿಂದ 5 ನೇ ಪ್ರತಿವಾದಿಯರು ಮೂಲ ಪುರುಷ ಕುಬೇಂದ್ರಯ್ಯ ಹಾಗೂ 1 ನೇ ಪ್ರತಿವಾದಿ ಪಾರ್ವತಿ ಇವರು ಅನಾಥ ಮಗುವನ್ನು ಸಾಕಿ ಸಲುಹಿ ತಮ್ಮ ಹೆಸರನ್ನು ಶಾಲಾ ದಾಖಲೆಗಳಲ್ಲಿ ನಮೂದಿಸಿರುವುದರಿಂದ 6 ನೇ ಪ್ರತಿವಾದಿಗೆ ಪಿತ್ರಾರ್ಜಿತ ಅಸ್ತಿಗಳಲ್ಲಿ ಯಾವುದೇ ಹಕ್ಕಿಲ್ಲ ಎಂದು ತೀರ್ಪು ನೀಡಿರುತ್ತದೆ. ಆದ್ದರಿಂದ

ಪ್ರಕರಣದ ಸಂಗತಿಗಳು ಬೇರೆ ಬೇರೆ ಆಗಿರುವುದರಿಂದ ಸದರಿ ತೀರ್ಪು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದು ಪರಿಗಣಿಸುತ್ತೇನೆ.

38. ಅದೇ ರೀತಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಎ ಐ ಆರ್ 1977 ಕರ್ನಾಟಕ 115 ತೀರ್ಪನ್ನು ಉಲ್ಲೇಖಿಸಿದ್ದು, ಸದರಿ ಪ್ರಕರಣದಲ್ಲಿ 1 ರಿಂದ 7 ನೇ ವಾದಿಯರು ಹನಮಂತಪ್ಪನ ಹೆಂಡತಿ ಹಾಗೂ ಮಕ್ಕಳಾಗಿದ್ದು ದಾವಾ ಆಸ್ತಿಗಳಲ್ಲಿ ಪಾಲು ಕೇಳಿ ದಾವೆ ಸಲ್ಲಿಸಿದ್ದು ಅದನ್ನು ಪ್ರತಿವಾದಿಯರು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಪ್ರಕರಣದ ಸಾಕ್ಷ್ಯ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಹನುಮಂತಪ್ಪ ಹಾಗೂ 1 ನೇ ವಾದಿಯ ಮಧ್ಯ ವೈವಾಹಿಕ ಸಂಬಂಧ ಇರುವುದಿಲ್ಲ. ಆದ್ದರಿಂದ 2 ರಿಂದ 7 ನೇ ವಾದಿಯರು ಹನಮಂತಪ್ಪನ ಮಕ್ಕಳು ಅಲ್ಲ. ಅದಗ್ಯೂ ಕೂಡಾ 1 ನೇ ವಾದಿ ಹಾಗೂ ಹನಮಂತಪ್ಪನ ಮಧ್ಯ ಕಾನೂನುಬದ್ದ ವಿಚ್ಚೇದನೆ ಅಗಿರುವುದಿಲ್ಲ ಆದ್ದರಿಂದ 1 ನೇ ವಾದಿ ತನ್ನ ಗಂಡನ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳಲು ಹಕ್ಕುದಾರರು ಎಂದು ತೀರ್ಪು ನೀಡಿರುತ್ತದೆ. ಈ ಪ್ರಕರಣದಲ್ಲಿ ಕೂಡಾ 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪನ ಮಧ್ಯ ಕಾನೂನು ಬದ್ದವಾಗಿ ವಿಚ್ಚೇದನೆ ಆಗಿರುವುದಿಲ್ಲ. ಆದ್ದರಿಂದ ಮೃತ ಕಲ್ಲಪ್ಪನು 1 ನೇ ಪ್ರತಿವಾದಿಯ ಜೀವಿತ ಕಾಲದಲ್ಲಿ 2 ನೇ ವಿವಾಹ ಆಗಿರುವುದರಿಂದ ಅವರ ಸಂಬಂಧದಿಂದ ಜನಿಸಿದ 2 ರಿಂದ 4 ನೇ ಪ್ರತಿವಾದಿಯರು ಶೂನ್ಯ ವಿವಾಹದಿಂದಾಗಿ ಜನಿಸಿದ ಮಕ್ಕಳು ಎಂದು ಪರಿಗಣಿಸಲಾಗುತ್ತದೆ. ಸದರಿ ತೀರ್ಪು 2 ರಿಂದ 4 ನೇ ಪ್ರತಿವಾದಿಯರ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿ ಸಹಾಯಕವಲ್ಲ ಎಂದು ಪರಿಗಣಿಸುತ್ತೇನೆ.

39. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ 1994 ಎ ಐ ಆರ್

853 ತೀರ್ಪನ್ನು ಉಲ್ಲೇಖಿಸಿದ್ದು, ಅದರಲ್ಲಿ ಮಾನ್ಯ ನ್ಯಾಯಾಲಯವು ಮೋಸದಿಂದ ಆದ ತೀರ್ಪು ಅಥವಾ ಡಿಕ್ರಿಯನ್ನು ಯಾವ ಹಂತದಲ್ಲಾದರೂ ಪ್ರಶ್ನಿಸಬಹುದು ಎಂದು ತಿಳಿಸಿರುತ್ತದೆ. ಈ ಪ್ರಕರಣದಲ್ಲಿ 2 ರಿಂದ 4 ನೇ ಪ್ರತಿವಾದಿಯರು ಎಲ್ಲಿಯೂ ಕೂಡಾ ಮೋಸದ ವಿಷಯವನ್ನು ಪ್ರಸ್ತಾಪಿಸಿಲ್ಲ. ವಾದಿಯ ಜನ್ಮ ದಿನಾಂಕದಲ್ಲಿಯ ಹಾಗೂ ಜಾಹಿರಾತು ಪ್ರಕಟಣೆಯ ದಿನಾಂಕಗಳನ್ನು ಉಲ್ಲೇಖಿಸಿ ಅದನ್ನು ಮೋಸ ಎಂದು ಪರಿಗಣಿಸಲಾಗದು. ಮೋಸದ ಬಗ್ಗೆ ತಮ್ಮ ತಕರಾರಿನಲ್ಲಿ ಉಲ್ಲೇಖಿಸಿ ಅದನ್ನು ರುಜುವಾತು ಪಡಿಸಬೇಕು. ಪ್ರತಿವಾದಿಯರು ಮೋಸದ ಬಗ್ಗೆ ಪ್ರತಿವಾದ ಪತ್ರದಲ್ಲಿ ತಿಳಿಸದೇ ಇರುವುದರಿಂದ ಹಾಗೂ ಈ ಬಗ್ಗೆ ಸೂಕ್ತ ಸಾಕ್ಷಾಧಾರಗಳು ಇಲ್ಲದೇ ಇರುವುದರಿಂದ ಮೇಲೆ ಉಲ್ಲೇಖಿಸಿದ ತೀರ್ಪು 2 ರಿಂದ 4 ನೇ ಪ್ರತಿವಾದಿಯರ ಪ್ರಕರಣಕ್ಕೆ ಸಹಾಯಕವಲ್ಲ ಎಂದು ಪರಿಗಣಿಸುತ್ತೇನೆ.

40. ವಾದಿ ಹಾಗೂ ಪ್ರತಿವಾದಿಯರ ಪರ ಮಂಡಿಸಿದ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಕುಲಂಕುಷವಾಗಿ ಪರಿಶೀಲಿಸಲಾಗಿ, ನ್ಯಾಯಾಲಯವು ವಾದಿಯು ಮೃತ ಕಲ್ಲಪ್ಪನ ಮಗಳು ಹಾಗೂ 1 ನೇ ಪ್ರತಿವಾದಿಯು ಕಲ್ಲಪ್ಪನ ಮೊದಲನೆ ಹೆಂಡತಿ ಎಂಬುದನ್ನು ವಾದಿ ಸೂಕ್ತ, ಸುಸಂಭದ್ದವಾದ ಹಾಗೂ ನಂಬಲ ಸಾಕ್ಷ್ಯಾಧಾರಗಳೊಂದಿಗೆ ರುಜುವಾತುಪಡಿಸಿರುತ್ತಾರೆ. ಆದ್ದರಿಂದ ಪುನರ್ ರಚಿಸಿದ ವಿವಾದಾಂಶ ನಂ.3 ನ್ನು ಸಕರಾತ್ಮಕವಾಗಿ ಉತ್ತರಿಸುತ್ತೇನೆ.

41. **ವಿವಾದಾಂಶ ನಂ.1 ಮತ್ತು 2.** ಈ ಎರಡು ವಿವಾದಾಂಶಗಳು ಒಂದೊಂಕೊಂದು ಹೊಂದಿಕೊಂಡಿರುವುದರಿಂದ ಚರ್ಚೆ ಪುನರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಏಕಕಾಲಕ್ಕೆ ಚರ್ಚೆಗೆ ಕೈಗೆತ್ತಿಕೊಂಡಿರುತ್ತೇನೆ.

ವಾದಿಯು ದಾವಾ ಆಸ್ತಿಗಳು ಮೂಲ ಪುರುಷ ಕಲ್ಲಪ್ಪನಿಗೆ ಸೇರಿದ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಅವುಗಳಲ್ಲಿ ತಾನು ಹಾಗೂ ಒಂದನೇ ಪ್ರತಿವಾದಿ ಜಂಟಿ ಸ್ವಾಧೀನ ಹೊಂದಿರುತ್ತೇವೆ ಎಂದು ವಾದಿಸಿರುತ್ತಾರೆ. ದಾವಾ ಆಸ್ತಿಗಳು ಮೂಲತಃ ಕಲ್ಲಪ್ಪನಿಗೆ ಸೇರಿದ ಆಸ್ತಿಗಳು ಎಂಬುದನ್ನು 2 ರಿಂದ 4 ನೇ ಪ್ರತಿವಾದಿಯರು ಎಲ್ಲಿಯು ಅಲ್ಲಗಳೆದಿರುವುದಿಲ್ಲ. ಪ್ರತಿವಾದಿ ಪರ ವಕೀಲರು ತಮ್ಮ ವಾದ ಸಂಧರ್ಬದಲ್ಲಿ ಕೂಡಾ ಅದನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ.

42. ವಾದಿ ತಾನು ಮೃತ ಕಲ್ಲಪ್ಪ ಹಾಗೂ ಒಂದನೇ ಪ್ರತಿವಾದಿಯ ಮಗಳು ಎಂಬುದನ್ನು ರುಜುವಾತು ಪಡಿಸಿರುತ್ತಾರೆ. ಮೂಲ ಪುರುಷ ಕಲ್ಲಪ್ಪ ಜಿನಪ್ಪ ಕೋಟಿ ಇವರು ದಿನಾಂಕ 01-12-2021 ರಂದ ಮೃತ ಪಟ್ಟಿರುತ್ತಾರೆ. ಮೃತ ಕಲ್ಲಪ್ಪನಿಗೆ ಕಲ್ಲಪ್ಪನ ಮೊದಲನೇ ಹೆಂಡತಿ ಶ್ರೀಮತಿ ಶಾಂತವ್ವ. ಸದರಿ ಅವರ ವೈವಾಹಿಕ ಜೀವನದಿಂದಾಗಿ ವಾದಿ ಜನಿಸಿರುತ್ತಾರೆ. 2 ರಿಂದ 4 ನೇ ಪ್ರತಿವಾದಿಯರು ಮೃತ ಕಲ್ಲಪ್ಪನಿಗೆ 2 ನೇ ಹೆಂಡತಿ ಸುಧಾ ಇವಳಿಂದ ಜನಿಸಿದ ಮಕ್ಕಳು. ವಾದಿ ಹಾಗೂ ಪ್ರತಿವಾದಿಯರು ಮೃತ ಕಲ್ಲಪ್ಪನ ಸರಳ ಹಾಗೂ ನೇರ ವಾರಸುದಾರರು. ಕಲ್ಲಪ್ಪ ಯಾವುದೇ ನೋಂದಾಯಿತ ವಿಭಾಗ ಪತ್ರ ಅಥವಾ ಮೃತ್ಯು ಪತ್ರ ಮಾಡದೆ ಮೃತ ಪಟ್ಟಿರುತ್ತಾರೆ. ದಾವಾ ಆಸ್ತಿಗಳು ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು. 2 ರಿಂದ 4 ರವರ ಹೆಸರುಗಳು ದಾವಾ ಆಸ್ತಿಗಳಲ್ಲಿ ದಾಖಲಾಗಿರುವುದು ಅವು ಅವುಗಳ ಮಾಲಿಕತ್ವವನ್ನು ರುಜುವಾತುಪಡಿಸುವುದಿಲ್ಲ. ವಾದಿ ಹಾಗೂ 1 ನೇ ಪ್ರತಿವಾದಿಯರು ಮೃತ ಕಲ್ಲಪ್ಪನ ವಾರಸುದಾರರು ಆಗಿರುವುದರಿಂದ ದಾವಾ ಆಸ್ತಿಗಳಲ್ಲಿ ಹಕ್ಕು ಹೊಂದಿರುತ್ತಾರೆ. ವಾದಿ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಭೌತಿಕವಾಗಿ ಸ್ವಾ ಧಿನದಲ್ಲಿ ಇಲ್ಲದಿದ್ದರೂ

ಕೂಡಾ ಅವರ ಸ್ವಾ ಧಿನವನ್ನು ರಚನಾತ್ಮಕ ಸ್ವಾಧೀನ (Constructive Possession) ಎಂದು ಪರಿಗಣಿಸಲಾಗುತ್ತದೆ. ಆದ್ದರಿಂದ ವಾದಿಯು ದಾವಾ ಆಸ್ತಿಗಳು ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎಂಬುದನ್ನು ರುಜುವಾತುಪಡಿಸಿರುತ್ತಾರೆ ಎಂಬ ನಿರ್ಧಾರಕ್ಕೆ ಬಂದಿರುತ್ತೇನೆ. 39. ವಾದಿ ದಾವಾ ಆಸ್ತಿಗಳು ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಅವುಗಳಲ್ಲಿ ತಾನು ಹಾಗೂ ಪ್ರತಿವಾದಿಯರು ಜಂಟಿ ಕುಟುಂಬದ ಸದಸ್ಯರು ಎಂದು ವಾದಿಸಿರುತ್ತಾರೆ. 2 ರಿಂದ 4 ನೇ ಪ್ರತಿವಾದಿಯರು ದಾವಾ ಆಸ್ತಿಗಳು ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂಬುದನ್ನು ಅಲ್ಲಗಳೆದಿರುವುದಿಲ್ಲ. ವಾದಿಯರು ಹಾಜರು ಪಡಿಸಿದ ನಿ.ಡಿ.1 ರಿಂದ 6, 9 ಮತ್ತು 10 ದಾಖಲೆಗಳು, ದಾವಾ ಆಸ್ತಿಗಳು ಮೂಲತಃ ಮೃತ ಕಲ್ಲಪ್ಪನ ತಂದೆ ತನ್ನ ಜೀವಿತ ಕಾಲದಲ್ಲಿ ತನ್ನ ಇಬ್ಬರು ಮಕ್ಕಳಿಗೆ ಮೂಲ ಸರ್ವೆ ನಂ.159/1 ಮತ್ತು 2 ರಲ್ಲಿ 1979 ರಲ್ಲಿ ಪಾಲು ಮಾಡಿಕೊಟ್ಟಿದ್ದು ಪಾಲಿನ ಪ್ರಕಾರ ಕಲ್ಲಪ್ಪ ಹಾಗೂ ಆತನ ಸಹೋದರನ ಹೆಸರಿಗೆ ಆಸ್ತಿಗಳು ಬಂದಿರುತ್ತವೆ. ಪಾಲಿನಲ್ಲಿ ಸರ್ವೆ ನಂ.159/2 ರಲ್ಲಿಯ 11 ಎಕರೆ 35 ಗುಂಟೆ ಜಮೀನು ಕಲ್ಲಪ್ಪನ ಹೆಸರಿಗೆ ದಾಖಲಾಗಿದ್ದು ಕಲ್ಲಪ್ಪನ ಜೀವಿತಕಾಲದಲ್ಲಿ ಆತನ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿದ್ದು ಆತನ ಮರಣಾ ನಂತರ 2 ರಿಂದ 4 ನೇ ಪ್ರತಿವಾದಿಯರ ಹೆಸರುಗಳು ದಾಖಲಾಗಿರುತ್ತವೆ. ಮೂಲತಃ ದಾವಾ ಆಸ್ತಿಗಳು ಕಲ್ಲಪ್ಪನಿಗೆ ಸೇರಿದ್ದು ಎಂಬದನ್ನು ಡಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಕೂಡ ಒಪ್ಪಿಕೊಂಡಿರುತ್ತಾರೆ.

43. ವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡ ಕಲ್ಲಪ್ಪ ಜೀನ್ನಪ್ಪ ಕೋಟಿ ಇವರು ದಿಃ 01-12-2021

ರಂದು ಮೃತ ಪಟ್ಟಿರುತ್ತಾರೆ. 1 ನೇ ಪ್ರತಿವಾದಿ ಕಲ್ಲಪ್ಪನ ಮೊದಲನೇ ಹೆಂಡತಿ. ವಾದಿ ಕಲ್ಲಪ್ಪನ ಮೊದಲನೆ ಹೆಂಡತಿ ಅಂದರೆ 1 ನೇ ಪ್ರತಿವಾದಿಯ ಮಗಳು. 2 ರಿಂದ 4 ನೇ ಪ್ರತಿವಾದಿಯರು ಮೃತ ಕಲ್ಲಪ್ಪನ 2 ನೇ ಹೆಂಡತಿ ಸುಧಾ ಇವರಿಗೆ ಜನಿಸಿದ ಮಕ್ಕಳು. ದಾವಾ ಆಸ್ತಿಗಳು ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಕಲ್ಲಪ್ಪ ಯಾವುದೇ ಮರಣ ದಾಖಲೆಯನ್ನು ಅಥವಾ ನೋಂದಾಯಿತ ದಾಖಲೆಯನ್ನು ಬರೆಯದೆ ಮೃತ ಪಟ್ಟಿದ್ದು ವಾದಿ ಹಾಗೂ ಪ್ರತಿವಾದಿಯರು ಕಾನೂನು ಬದ್ಧ ವಾರಸುದಾರರು. ಆದ್ದರಿಂದ, ದಾವಾ ಆಸ್ತಿಗಳಲ್ಲಿ ವಾದಿ ಹಾಗೂ ಪ್ರತಿವಾದಿಯರು ಕಾನೂನು ಬದ್ಧವಾಗಿ ಪಾಲು ಪಡೆದುಕೊಳ್ಳಲು ಹಕ್ಕುದಾರರು. ಆದ್ದರಿಂದ ವಿವಾದಂಶ 1 ಮತ್ತು 2 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

44. **ವಿವಾದಂಶ ನಂ.4:** ವಾದಿಯು ದಾವಾ ಆಸ್ತಿಗಳಲ್ಲಿರುವ ತನ್ನ ಪಾಲಿನ 1:5 ಹಿಸ್ಸೆಯನ್ನು ಕೇಳಿರುತ್ತಾರೆ. ವಾದಿಯು ವಂಶಾವಳಿಯಲ್ಲಿ ಮೂಲ ಪುರುಷ ಕಲ್ಲಪ್ಪ ಕೋಟಿ ಆತನ ಮೊದಲನೆ ಹೆಂಡತಿ ಶಾಂತವ್ವ (1 ನೇ ಪ್ರತಿವಾದಿ) ಹಾಗೂ ಮಗಳು (ವಾದಿ) , ಸುಧಾ ಕಲ್ಲಪ್ಪನ ಹೆಂಡತಿ ಅನ್ನುಕೊಳ್ಳುವವರು. ಅವರಿಗೆ ನಾಗಪ್ಪ (ಪ್ರತಿವಾದಿ ನಂ.2), ಕಸ್ತೂರಿ (ಪ್ರತಿವಾದಿ ನಂ.3), ಹಾಗೂ ರತ್ನವ್ವ (ಪ್ರತಿವಾದಿ ನಂ.4) ಮಕ್ಕಳು ಎಂದು ತೋರಿಸಿರುತ್ತಾರೆ. ವಾದಿಯು ತಾನು ಕಲ್ಲಪ್ಪ ಹಾಗೂ ಒಂದನೇ ಪ್ರತಿವಾದಿಯ ಮಗಳು ಎಂದು ರುಜುವಾತು ಪಡಿಸಿರುತ್ತಾರೆ. ಸುಧಾ ಎನ್ನುವವರು ಕಲ್ಲಪ್ಪನ 2 ನೇ ಹೆಂಡತಿ ಆಗಿದ್ದು, 2 ರಿಂದ 4 ನೇ ಪ್ರತಿವಾದಿಯರು ಅವರ ಮಕ್ಕಳು. ವಾದಿ ಹಾಗೂ ಪ್ರತಿವಾದಿಯರು ಕಲ್ಲಪ್ಪನ ಸರಳ ಹಾಗೂ ನೇರವಾರಸುದಾರರು. ಸುಧಾ ಕಲ್ಲಪ್ಪನ 2 ನೇ ಹೆಂಡತಿ

ಆಗಿರುವುದರಿಂದ ತನ್ನ ಗಂಡನ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳಲು ಹಕ್ಕುದಾರಳು ಅಲ್ಲ.

45. ವಾದಿ ಪರ ಮಾನ್ಯ ನ್ಯಾಯಾವಾದಿಗಳು ಕರ್ನಾಟಕ ಉಚ್ಚನ್ಯಾಯಾಲ ಧಾರವಾಡ ಪೀಠದ ನಿಯಮಿತ ಪ್ರಥಮ ಮೇಲ್ಮನವಿ (ಆರ್ ಎಫ್ ಎ) ನಂ.100059/2019 ದಿನಾಂಕ 27-02-2026 ರ ತಿರ್ಪನ್ನು ಉಲ್ಲೇಖಿಸಿದ್ದು, ಮಾನ್ಯ ಉಚ್ಚನ್ಯಾಯಾಲಯು ತನ್ನ ತಿರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ರೇವಣಸಿದ್ದಪ್ಪ ಮತ್ತು ಇನ್ನೊಬ್ಬ ವಿರುದ್ದ ಮಲ್ಲಿಕಾರ್ಜುನ ಮತ್ತು ಇತರರು ಪ್ರಕರಣದಲ್ಲಿಯ ತಿರ್ಪನ್ನು ಉಲ್ಲೇಖಿಸಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ. ಸದರಿ ತಿರ್ಪಿನ ಭಾಗವನ್ನು ಉಲ್ಲೇಖಿಸಿದ್ದು ಅದು ಈ ಕೆಳಗಿನಂತೆ ಓದಲ್ಪಡುತ್ತದೆ.

> *"The trial court has not examined Sec.16(3) of the Hindu Marriage Act, 1955 and blindly granted 1/3rd share to the plaintiff. However, it is to be noted here that during subsistence of the marriage of plaintiff with Jayappa, he married defendant No.1. Hence, said marriage is violative of Sec.5(i) of Hindu Marriage Act, 1955. Hence, said marriage is void abinitio."*

> *"The children born under void marriage will not get any share in ancestral property, but they would get share only in the property of their*

> *parents. Defendant No.1 being second wife of deceased Jayappa will not get any share in the property of her husband. She can only claim maintenance. Defendant No.2 and 3 being daughters born under void marriage, they would get share only in the share of their father. Under these circumstances, there shall be notional partition and in that notional partition between plaintiff and deceased Jayappa would be ½ each and in the share of Jayappa, plaintiff No.2 and 3 would get 1/3rd each; thus, plaintiff would get half share+1/3rd share in the remaining half share i.e., 2/3rd, which is more than 1/3rd in the suit schedule properties."*

ಈ ಮೇಲಿನ ತೀರ್ಪನ ಅನ್ವಯ ಪಿತ್ರಾರ್ಜಿತ ಜಂಟಿ ಕಟುಂಬಂದ ಆಸ್ತಿಗಳಲ್ಲಿ ಶೂನ್ಯ ವಿವಾಹದಿಂದ ಜನಿಸಿದ ಮಕ್ಕಳಿಗೆ ತಂದೆಯ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ. ಆದರೆ ಮೃತ ತಂದೆಯ ಪಾಲಿಗೆ ಪಾಲು ಹಂಚಿಕೆ ಮಾಡುವ ಮೂಲಕ ಅವರ ಪಾಲಿನಲ್ಲಿಯ ಪಾಲನ್ನು ನೀಡಬೇಕಾಗುತ್ತದೆ ಎಂಬುವುದು ಸ್ಪಷ್ಟವಾಗುತ್ತದೆ. ಈ ಮೇಲೆ ಚರ್ಚಿಸಿದಂತೆ 2 ರಿಂದ 4 ನೇ ಪ್ರತಿವಾದಿಯರು ಮೃತ ಕಲ್ಲಪ್ಪನಿಗೆ 1 ನೇ ಪ್ರತಿವಾದಿ ಜೀವಂತ ಇರುವಾಗ ಸುಧಾಳನ್ನು ಕಲ್ಲಪ್ಪ ಮದುವೆಂದೂಗಿದ್ದಾನೆ . ಸದರಿಯವರ ಮಧ್ಯ ಕಾನೂನು ಬದ್ಧವಾಗಿ ವಿಚ್ಛೇದನೆ ಆಗದೇ ಇರುವುದರಿಂದ 2 ರಿಂದ 4 ನೇ ಪ್ರತಿವಾದಿಯರು ವಾದಿ ಹಾಗೂ 1 ನೇ ಪ್ರತಿವಾದಿಗೆ ಕಲ್ಲಪ್ಪನ 1/3 ನೇ

ಹಿಸ್ಸೆಯಲ್ಲಿ ತಲಾ 1/5 ನೇ ಹಿಸ್ಸೆ ಮಾತ್ರ ಪಡೆದುಕೊಳ್ಳಲು ಹಕ್ಕುದಾರರು. 2 ನೇ ಹೆಂಡತಿ ಸುಧಾ ಇವರಿಂದ ಜನಿಸಿದ ಮಕ್ಕಳು ಆಗಿದ್ದರಿಂದ ಸದರಿ ಯವರಿಗೆ ವಾದಿಯರ ಜೊತೆಗೆ ಸಮ ಪಾಲು ಇರುವುದಿಲ್ಲ.

46. ವಾದಿ ಹಾಗೂ 1 ನೇ ಪ್ರತಿವಾದಿ ಮತ್ತು ಮೃತ ಕಲ್ಲಪ್ಪನಿಗೆ ಕಾಲ್ಪನಿಕ ವಿಭಜನೆ ಮಾಡುವ ಮೂಲಕ ತಲಾ 1:3 ಅಂಶ ಹಿಸ್ಸೆ ನೀಡಿ, ಕಲ್ಲಪ್ಪನಿಗೆ ನೀಡಿದ 1:3 ಹಿಸ್ಸೆಯಲ್ಲಿ 2 ರಿಂದ 4 ನೇ ಪ್ರತಿವಾದಿಯರಿಗೆ ಹಂಚಿಕೆ ಮಾಡಬೇಕಾಗುತ್ತದೆ. ಆದ್ದರಿಂದ ದಾವಾ ಆಸ್ತಿಗಳಲ್ಲಿ ವಾದಿ ಹಾಗೂ1 ನೇ ಪ್ರತಿವಾದಿ ತಲಾ 1:3 ನೇ ಹಿಸ್ಸೆ, ಹಾಗೂ 2 ರಿಂದ 4 ನೇ ಪ್ರತಿವಾದಿಯರು ಜಂಟಿ ಆಗಿ 1:3 ನೇ ಹಿಸ್ಸೆ ಪಡೆದುಕೊಳ್ಳಲು ಹಕ್ಕುದಾರರು. ಆದ್ದರಿಂದ ವಿವಾದಂಶ ನಂ.4 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

47. **ವಿವಾದಂಶ ನಂ 5:** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಂತಿಮವಾಗಿ ಕೆಳಗಿನಂತೆ.

## ಆದೇಶ

ವಾದಿ ಸಲ್ಲಿಸಿದ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ಈ ಮೂಲಕ ವಾದಿ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಸಮನಾಗಿ ತಲಾ 1/3+1/5 ನೇ ಹಿಸ್ಸೆ ಪಡೆದುಕೊಳ್ಳಲು ಹಕ್ಕುದಾರರು ಎಂದು ಘೋಷಿಸಲಾಗಿದೆ.

ಈ ಮೂಲಕ 2 ರಿಂದ 4 ನೇ ಪ್ರತಿವಾದಿಯರು ತಮ್ಮ ತಂದೆಯ 1/3 ನೇ ಹಿಸ್ಸೆಯಲ್ಲಿ ಜಂಟಿಯಾಗಿ 1/5 ನೇ ಹಿಸ್ಸೆ ಪಡೆದುಕೊಳ್ಳಲು ಹಕ್ಕುದಾರರು ಎಂದು ಘೋಷಿಸಲಾಗಿದೆ.

ಕಚೇರಿಯವರು ಆದೇಶಿಸಿದಂತೆ ಪ್ರಾಥಮಿಕ ಡಿಕ್ರಿ ರಚಿಸುವಂತೆ ಸೂಚಿಸಲಾಗಿದೆ.

ಪ್ರತಿವಾದಿಯರು ತಮ್ಮ ಪಾಲಿನ ನ್ಯಾಯಾಲಯದ ಶುಲ್ಕ ಪಾವತಿಸಿದ ನಂತರ ಡಿಕ್ರಿ ರಚಿಸಲು ಸೂಚಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಶ್ರೀಘಲಿಪಿಗಾರರಿಗೆ ಉಕ್ತಲೇಖನ ನೀಡಿ ಅಭಿಲೇಖನ ನೀಡಿ ಅಭಿಲೇಖನವಾದ ನಂತರ ತಿದ್ದುಪಡಿ ಮಾಡಿ ತೆರದ ನ್ಯಾಯಾಲದಲ್ಲಿ ದಿನಾಂಕಃ 23 ನೇ ಜುಲೈ 2026 ರಂದು ಉದ್ಘೋಷಿಸಿರುತ್ತೇನೆ.)

**(ಆರ್.ಎಲ್. ಹೋನೋಲೆ)**
**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕಲಘಟಗಿ.**

## ಅನುಬಂಧ

**1. ವಾದಿಗಳ ಪರ ನೀಡಿದ ಸಾಕ್ಷಿಗಳ ಪಟ್ಟಿಃ**

| | | |
|---|---|---|
| ಪ್ರಾಸಾ-1 | : | ಶ್ರೀಮತಿ ಪದ್ಮಾವತಿ ಕೋಂ ಕಲ್ಲಪ್ಪ ಬಸರಿಕೊಪ್ಪ |

**2. ವಾದಿಗಳ ಪರ ನೀಡಿದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ- 1 ಮತ್ತು 2 | : | ಪಹಣಿ ಪತ್ರಿಕೆಗಳು |
| ನಿಪಿ- 3 ರಿಂದ 5 | : | ಆರ್ ಓ ಆರ್ |
| ನಿಪಿ- 6 | : | ಮ್ಯುಟೇಷನ್ |
| ನಿಪಿ- 7 | : | ವಾದಿಯ ತಂದೆಯ ಮರಣ ದಾಖಲೆ |
| ನಿಪಿ- 8 | : | ವಾದಿಯ ಶಾಲಾ ದಾಖಲೆ |
| ನಿಪಿ- 9 | : | ದೃಡಿಕರಣ ಪತ್ರ |
| ನಿಪಿ- 10 | : | ತೆರಿಗೆ ಪಾವತಿಸಿದ ರಶೀದಿ |

**3. ಪ್ರತಿವಾದಿಯರ ಪರ ಗುರುತಿಸಲಾದ ಸಾಕ್ಷಿಗಳ ಪಟ್ಟಿಃ**

ಡಿಬ್ಲ್ಯೂ-1 ನಾಗಪ್ಪ ತಂದೆ ಕಲ್ಲಪ್ಪ ಕೋಟಿ

ಡಿಬ್ಲ್ಯೂ-2 ರಾಮಪ್ಪ ತಂದೆ ತಂದೆ ಭೀಮಪ್ಪ ಯಮ್ಮೆಟ್ಟಿ

**4. ಪ್ರತಿವಾದಿಯರ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಡಿ- 1 ಮತ್ತು 2 | : | ಪಡಿತರ ಚೀಟಿಗಳು |
| ನಿಡಿ- 3 ರಿಂದ 5 | : | ಶಾಲಾ ಪ್ರಮಾಣ ಪತ್ರಗಳು |
| ನಿಡಿ- 6 | : | ಕ್ರಿಮಿನಲ್ ರಿವಿಜನ್ ಪಿಟಿಷನ್ ರಜಿಸ್ಟರ ಪ್ರತಿ |
| ನಿಡಿ- 7 | : | ಜಿಲ್ಲಾ ನ್ಯಾಯಾಲಯದ ಕ್ರಿಮಿನಲ್ ರಜಿಸ್ಟರ ಪ್ರತಿ |
| ನಿಡಿ- 8 | : | ಪಡಿತರ ಚೀಟಿ |
| ನಿಡಿ- 9 | : | ಆಧಾರ ಕಾರ್ಡ ಪ್ರತಿ |
| ನಿಡಿ- 10 | : | ವಿವಾಹ ಆಮಂತ್ರಣ ಪತ್ರಿಕೆ |
| ನಿಡಿ-11 | : | ಸಂಯುಕ್ತ ಕರ್ನಾಟಕ ಪತ್ರಿಕೆ ಅವರು ನೀಡಿದ ರಶೀದಿ |
| ನಿಡಿ-12 | : | ಮತದಾರರ ಪಟ್ಟಿ |
| ನಿಡಿ-13 ರಿಂದ 16 | : | ಗ್ರಾಮ ಪಂಚಾಯತಿಯವರು ನೀಡಿದ ರಶೀದಿ |
| ನಿಡಿ-17 | : | ಪಡಿತರ ಚೀಟಿ |

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕಲಘಟಗಿ.**